Swabhimani Sahakari
Pages : 28/ 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026

Volume - 23
Issue - 06
June - 2026



## ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಉಪ ಮುಖ್ಯಮಂತ್ರಿಯಾಗಿ ಡಾ. ಜಿ. ಪರಮೇಶ್ವರ್ ಅವರುಗಳಿಂದ ಅಧಿಕಾರ ಸ್ವೀಕಾರ

ರಾಜ್ಯದ ನೂತನ ಮುಖ್ಯಮಂತ್ರಿಗಳಿಗೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಮತ್ತು ಸಚಿವ ಸಂಪುಟದ ಎಲ್ಲ ಸಚಿವರುಗಳಿಗೆ
ಸಂಯುಕ್ತ ಸಹಕಾರಿಯ ಹಾರ್ದಿಕ ಶುಭಾಶಯಗಳು

ಜೂನ್ 01
**ವಿಶ್ವ ಹಾಲು ದಿನಾಚರಣೆ**




ಜೂನ್ 05
**ವಿಶ್ವ ಪರಿಸರ ದಿನಾಚರಣೆ**




ಜೂನ್ 26
**ಮೊಹರಂ**



ಸೌಹಾರ್ದ ಸಹಕಾರಿಗಳ ಸಂಖ್ಯೆ: 6782

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1768



ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ ಭೀಮನ ಅಮಾವಾಸ್ಯೆ, ಮೊಹರಮ್ ಹಾಗೂ ಕಾರಹುಣ್ಣಿಮೆಯ ಶುಭಾಶಯಗಳು. 2025-26 ನೇ ಸಾಲಿನ ಲೆಕ್ಕಪರಿಶೋಧನೆ, ನಂತರದಲ್ಲಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಮಹಾಸಭೆಗಳ ಸಿದ್ಧತೆಯಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತೊಡಗಿಸಿಕೊಂಡಿರುವುದಾಗಿ ಭಾವಿಸುತ್ತೇನೆ.

# ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗಾಗಿ ಸಿಬ್ಬಂದಿಗಳಿಗೆ ಆಧುನಿಕ ತಂತ್ರಜ್ಞಾನ, ಕೌಶಲ್ಯತೆ ಹಾಗೂ ವೃತ್ತಿಪರತೆ ಅಗತ್ಯ.

ಆತ್ಮೀಯ ಸಹಕಾರಿ ಬಂಧುಗಳಿಗೆ ಭೀಮನ ಅಮಾವಾಸ್ಯೆ, ಮೊಹರಮ್ ಹಾಗೂ ಕಾರಹುಣ್ಣಿಮೆಯ ಶುಭಾಶಯಗಳು. 2025-26ನೇ ಸಾಲಿನ ಲೆಕ್ಕಪರಿಶೋಧನೆಯ ನಂತರದಲ್ಲಿ ಸೌಹಾರ್ದ ಸಹಕಾರಿಗಳ ವಾರ್ಷಿಕ ಮಹಾಸಭೆಗಳ ಸಿದ್ಧತೆಯಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತೊಡಗಿಸಿಕೊಂಡಿರುವುದಾಗಿ ಭಾವಿಸುತ್ತೇನೆ.

ಇದು ಬದಲಾದ ಅರ್ಥವ್ಯವಸ್ಥೆಯ ಯುಗ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಪೈಪೋಟಿ ಯುಗ. ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಸಹಕಾರಿಯ ವ್ಯವಹಾರಗಳನ್ನು, ಲೆಕ್ಕ ಪತ್ರಗಳನ್ನು ಮತ್ತು ಸಹಕಾರಿಯ ಎಲ್ಲ ವ್ಯವಹಾರಗಳನ್ನು ಸಾಂಪ್ರದಾಯಿಕ ಪದ್ಧತಿಯ ಜೊತೆಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿ ಕೆಲಸ ನಿರ್ವಹಿಸುವ ಅಗತ್ಯತೆ ಇದೆ. ಈ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಯುಗದಲ್ಲಿ ಸಹಕಾರಿ ಸಂಸ್ಥೆಗಳ ಕಾರ್ಯಗಳಿಗೆ ಹಿನ್ನಡೆಯಾಗಬಹುದೆಂದು ಸಹಕಾರಿಗಳು ಅಂದುಕೊಂಡಿದ್ದರು. ಆದರೆ ಎಲ್ಲ ಪೈಪೋಟಿಗಳನ್ನು ಮೆಟ್ಟಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಈ ದಿಸೆಯಲ್ಲಿ ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಮತ್ತು ಕಷ್ಟಕಾಲದಲ್ಲೂ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂಬ ವಿಶ್ವಸಂಸ್ಥೆಯ ಹಾಗೂ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಹೇಳಿಕೆಗಳು ನಾವೆಲ್ಲರೂ ಹೆಮ್ಮೆ ಪಡುವ ವಿಷಯವಾಗಿದೆ. ಇದಕ್ಕೆ ಕಾರಣ ನಮ್ಮ ಸಹಕಾರಿ ಸಂಸ್ಥೆಗಳಿಗೆ ಸದಸ್ಯರ ಭದ್ರ ತಳಹದಿ. ಆಡಳಿತ ಮಂಡಳಿ ಸದಸ್ಯರು ಸಹಕಾರಿ ತತ್ವಗಳಲ್ಲಿ ದೃಢವಾದ ನಂಬಿಕೆ. ಸಹಕಾರಿ ಕಾನೂನು ಹಾಗೂ ನಿಯಮಗಳನ್ನು ಪಾಲಿಸಿಕೊಂಡು ಸಹಕಾರಿ ಸಂಸ್ಥೆಗಳು ಆಧುನಿಕತೆಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಲು ಪ್ರಾರಂಭಿಸಿರುವುದು.

ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ನಿರ್ವಹಿಸುವಾಗ ಕೌಶಲ್ಯತೆಯಿಂದ ಮತ್ತು ವೃತ್ತಿಪರತೆಯಿಂದ ಮಾಡುವುದು ಅಗತ್ಯ. ಸಹಕಾರಿ ಕೆಲಸಕಾರ್ಯಗಳನ್ನು ಯಾರು ಬೇಕಾದರು ಮಾಡಬಹುದು. ಆದರೆ ಅದು ವೃತ್ತಿಪರರು ಮಾಡಿದ ಕೆಲಸವಾಗುವುದಿಲ್ಲ. ವೃತ್ತಿಪರರು ಎಲ್ಲ ಕೆಲಸವನ್ನು ವೃತ್ತಿಪರವಾಗಿಯೇ ಮಾಡಬೇಕು. ವೃತ್ತಿಪರತೆಯಿಂದ ಮಾಡಿದಾಗ ದ್ವಂದ್ವಗಳಿಗೆ ಅವಕಾಶವಾಗುವುದಿಲ್ಲ. ತಪ್ಪುಗಳಿಗೆ ಅವಕಾಶವಾಗುವುದಿಲ್ಲ. ಕೆಲಸವನ್ನು ಶಿಸ್ತು ಬದ್ಧವಾಗಿ ಸಮಯಕ್ಕೆ ಸರಿಯಾಗಿ ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಲಾಗುತ್ತದೆ. ಅದಕ್ಕಾಗಿ ವೃತ್ತಿಪರತೆ ಅವಶ್ಯಕ. ಅದರಂತೆ ಮಾಡುವ ಕೆಲಸ ಕಾರ್ಯಗಳು ಕೌಶಲ್ಯತೆಯಿಂದ ಮಾಡಿದಾಗ ಸದಸ್ಯರು ಮತ್ತು ಸಾರ್ವಜನಿಕರು ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ತೃಪ್ತಿಯಿಂದ ಹಾಗೂ ಸಂತೃಪ್ತಿಯಿಂದ ವ್ಯವಹರಿಸಲು ಸಾಧ್ಯವಾಗುತ್ತದೆ. ಇದರಿಂದ ಸಹಕಾರಿ ಸಂಸ್ಥೆಗಳು ಅಭಿವೃದ್ಧಿಯತ್ತ ಸಾಗಲು ಸಾಧ್ಯವಾಗುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಸೂರ್ಯಕಾಂತ ರ್‍ಯಾಕಲೆ
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ ........ 2
ಸಂಪಾದಕೀಯ ........ 3
ಜ್ಞಾನ ಜ್ಯೋತಿ ........ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........ 05–18
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........ 19–20
**ಲೇಖನಗಳು :**
ಆದಾಯ ತೆರಿಗೆ ಕಾಯ್ದೆ, 2025ರ ಅಡಿಯಲ್ಲಿ 01.04.2026 ರಿಂದ ಜಾರಿಗೆ ಬರುವ ಟಿಡಿಎಸ್ (TDS) ನಿಬಂಧನೆಗಳು ........ 21–23
ಉದ್ಯೋಗಿಗಳ ಭದ್ರತೆಗೆ ಕರ್ನಾಟಕದ ಕಡ್ಡಾಯ ಗ್ರ್ಯಾಚ್ಯುಟಿ ವಿಮೆ – ಒಂದು ಮಹತ್ವದ ಹೆಜ್ಜೆ. ..... ........ 24–24
ಸ್ವಾಸ್ಥ್ಯ, ಜ್ಞಾನ ಮತ್ತು ಅಂತರಂಗದ ಅರಿವಿಗಾಗಿ – ಯೋಗ ........ 25–26
ಸಹಕಾರಿ ನೌಕರರು ಜನರ/ಸದಸ್ಯರ ಸೇವಕರು ........ 27–28

# ಸಂಪಾದಕೀಯ

## ವಿಶ್ವಶಾಂತಿಗಾಗಿ ಸಹಕಾರಿಗಳು

ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು 2026 ಮೇ 4 ರಂದು "ವಿಶ್ವಶಾಂತಿಗಾಗಿ ಸಹಕಾರಿಗಳು" ಎಂಬ ಘೋಷಣೆಯನ್ನು ಅನಾವರಣ ಮಾಡಿದ್ದಾರೆ. ಜುಲೈ 4, 2026 ರಂದು ಈ ದಿನವನ್ನು ವಿಶ್ವದಾದ್ಯಂತ ಆಚರಿಸಿ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಜವಾಬ್ದಾರಿಯಿದೆ ಎಂಬುದನ್ನು ಮನದಟ್ಟು ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಸಹಕಾರಿಗಳಿಗೆ ಇದು ಗೌರವ. ಈಗಾಗಲೇ 2010 ರಿಂದ 2020ರ ದಶಕವನ್ನು ಸಹಕಾರಿ ದಶಕವನ್ನಾಗಿ ಘೋಷಿಸಲಾಗಿತ್ತು. ಅದರಂತೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ವಿಶ್ವದಾದ್ಯಂತ ಅನೇಕ ಪ್ರಗತಿಪರ ಕಾರ್ಯಗಳು ನಡೆದು ಸಹಕಾರ ಕ್ಷೇತ್ರವನ್ನು ವಿಶ್ವದ ಅರ್ಥವ್ಯವಸ್ಥೆಯಲ್ಲಿ ಮುಖ್ಯವಾಹಿನಿಯಲ್ಲಿ ಗುರುತಿಸಲಾಗುತ್ತಿದೆ. ವಿಶ್ವ ಸಂಸ್ಥೆಯವರು 2012 ಮತ್ತು 2025 ಅನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಆಚರಿಸಲು ಕರೆ ನೀಡಿದ ಪರಿಣಾಮವಾಗಿ ಸಹಕಾರಿ ಕ್ಷೇತ್ರ ಇನ್ನು ಹೆಚ್ಚು ಕ್ರೀಯಾಶೀಲವಾಗಿದೆ. ಸಹಕಾರಿ ಸಂಸ್ಥೆಯ ಅಸ್ತಿತ್ವ ಜಗತ್ತಿದಾದ್ಯಂತ ಪರಿಚಯವಾಗುತ್ತಿದೆ. (**ಕೋ–ಆಪರೇಟಿವ್ ಐಡೆಂಟಿಟಿ ಇಸ್ ಬಿಕಮಿಂಗ್ ಮೋರ್ ಪ್ರಾಮಿನಂಟ್**) ಈ ಜವಾಬ್ದಾರಿಯನ್ನು ಎಲ್ಲ ಸಹಕಾರಿಗಳು ಸಂತೋಷದಿಂದ ಸ್ವೀಕರಿಸಬೇಕು ಮತ್ತು ಅದರಂತೆ ಕ್ರಮವಿಡಬೇಕು. ಪ್ರಸಕ್ತ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ಸಹಕಾರಿ ಕ್ಷೇತ್ರದ ಸೇವೆ ಕೇವಲ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಮೀಸಲಾಗಿರಕೂಡದು. ಸದಸ್ಯರ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿ ಅವರು ಸುಖ ಶಾಂತಿಯಿಂದ ಇರಬೇಕು ಇದೊಂದು ಜವಾಬ್ದಾರಿ ಎಂಬುದನ್ನು ಎಲ್ಲ ಸಹಕಾರಿ ಸಂಸ್ಥೆಗಳು ಅರಿತುಕೊಳ್ಳುವ ಸಮಯ ಇದಾಗಿದೆ.

ವಿಶ್ವಶಾಂತಿಗಾಗಿ ಸಹಕಾರಿ ಸಂಸ್ಥೆಗಳು ಯಾವ ಕ್ರಮಗಳನ್ನು ಅನುಸರಿಸಬಹುದು ಎಂಬುದು ಪ್ರಶ್ನೆಯಾಗಬಾರದು. **"ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ"** ಎಂಬ ಸಹಕಾರದ ಮೂಲ ಮಂತ್ರ, ವಿಶ್ವದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಹಕಾರಿ ಸಂಸ್ಥೆಗಳು ಚಾಚೂ ತಪ್ಪದೇ ಸಹಕಾರಿ ತತ್ವಗಳ ಅನುಷ್ಠಾನ ಮಾಡುವುದು, ಸಹಕಾರಿ ಸಂಸ್ಥೆಗಳು ಸದಸ್ಯರ ಆರ್ಥಿಕ ಅಭಿವೃದ್ಧಿಯ ಗುರಿ ಸಾಧಿಸುವುದರ ಜೊತೆಯಲ್ಲಿಯೇ ಅವರ ಶೈಕ್ಷಣಿಕ, ಸಾಮಾಜಿಕ, ಆರೋಗ್ಯ ಹಾಗೂ ಮಾನಸಿಕ ವಿಚಾರಗಳಿಗೆ ಸ್ಪಂದಿಸುವುದು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ಕ್ರಮವಿಡುವುದಾಗಿದೆ. ರಾಜಕೀಯ ಹಾಗೂ ಕೋಮು ಗಲಭೆಗಳು ಆಗದಂತೆ ಎಚ್ಚರ ವಹಿಸುವ ಹಾಗೂ ಅಮಾಯಕರು ಶೋಷಣೆಗೆ ಒಳಗಾಗದಂತೆ ಕೋಮು ಸೌಹಾರ್ದತೆ ಹೆಚ್ಚಿಸುವ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ಇದಕ್ಕೆ ಪೂರಕವಾಗಿ 2021 ರಲ್ಲಿ ಕೇಂದ್ರ ಸರಕಾರ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭಿಸುವಾಗ **"ಸಹಕಾರ ಸೇ ಸಮೃದ್ಧಿ"** ಎಂಬ ಘೋಷಣೆ ಮಾಡಿ ಅದರಂತೆ ಕ್ರಮವಿಡುತ್ತಿರುವುದು ಗಮನಾರ್ಹ ಪ್ರಗತಿಯಾಗಿದೆ. ವಿಶ್ವ ಶಾಂತಿಗಾಗಿ ಸಹಕಾರಿಗಳು ಎಂಬ ಧ್ಯೇಯದೊಂದಿಗೆ ದಿನಾಂಕ 4 ಜುಲೈ 2026 ರಂದು ಆಚರಿಸುವ ದಿನಾಚರಣೆ ಯಶಸ್ವಿಯಾಗುವಲ್ಲಿ ಎಲ್ಲ ಸಹಕಾರಿ ಸಂಸ್ಥೆಗಳು ಭಾಗಿಯಾಗೋಣ ಯಶಸ್ವಿಗೊಳಿಸೋಣ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ದೂರದೃಷ್ಟಿ"

ಈ ಜಗತ್ತಿನಲ್ಲಿ ಪ್ರತಿಕ್ಷಣ ಅಸಂಖ್ಯ ಘಟನೆಗಳು ನಡೆಯುತ್ತವೆ. ಹೀಗೆ ನಿರಂತರ ನಡೆಯುವ ಘಟನೆಗಳ ಪ್ರವಾಹವೇ ಜಗತ್ತು. ಈ ಎಲ್ಲಾ ಘಟನೆಗಳಲ್ಲಿ ಒಂದು ಏಕರೂಪತೆಯಿದೆ. ಈ ಜಗತ್ತಿನಲ್ಲಿ ಯಾವುದೇ ಒಂದು ಘಟನೆಯು ಪ್ರತ್ಯೇಕವಾಗಿಲ್ಲ. ಈ ಕ್ಷಣದ ಘಟನೆಯು ಮುಂದಿನ ಘಟನೆಗೆ ಕಾರಣವಾಗಿರುತ್ತದೆ. ಇಲ್ಲಿ ನಡೆದ ಘಟನೆಯು ಅಲ್ಲಿ ನಡೆದ ಘಟನೆಗೆ ಅಥವಾ ಎಲ್ಲಿಯೋ ನಡೆದ ಘಟನೆಗೆ ಕಾರಣವಾಗಿರುತ್ತದೆ. ಇದನ್ನೇ ಕಾರ್ಯ–ಕಾರಣ ಸಿದ್ಧಾಂತವೆಂದು ಕರೆಯುತ್ತಾರೆ. ಜಗತ್ತಿನ ಬಹುತೇಕ ಎಲ್ಲಾ ತತ್ತ್ವಜ್ಞಾನಿಗಳು ವಿಜ್ಞಾನಿಗಳು ಈ ಕಾರ್ಯ ಕಾರಣ ಸಿದ್ಧಾಂತವನ್ನು ಒಪ್ಪಿಕೊಂಡಿದ್ದಾರೆ. ಸಾಮಾನ್ಯರು ತಿಳಿದಂತೆ ಈ ಜಗತ್ತು ಅಸ್ತವ್ಯಸ್ತವಾಗಿಲ್ಲ ಸುವ್ಯವಸ್ಥಿತವಾಗಿದೆ. ಯಾವುದೋ ಒಂದು ನಿಗೂಢ ತತ್ವಕ್ಕೆ ಅನುಸರಿಸಿ ಜಗತ್ತು ನಡೆಯುತ್ತದೆ. ಸಾವಿರಾರು ವರುಷಗಳ ಹಿಂದೆಯೇ ನಮ್ಮ ದೇಶದ ಋಷಿಮುನಿಗಳು ಆ ತತ್ತ್ವಕ್ಕೆ ಕಾರ್ಯ–ಕಾರಣ ಸಿದ್ಧಾಂತವೆಂದು ಹೆಸರಿಸಿದರು. ಇದನ್ನು ಅರಿತುಕೊಂಡು ನಮ್ಮ ಬದುಕನ್ನು ನಾವು ಕಟ್ಟಿಕೊಂದು ನಮ್ಮ ಬದುಕನ್ನು ನಾವು ಕಟ್ಟಿಕೊಳ್ಳಬೇಕು. ಆಗ ನಮ್ಮ ಜೀವನವು ಆದರ್ಶವೂ, ಆನಂದಮಯವೂ ಆಗುತ್ತದೆ. ಇದನ್ನೇ ಯೋಗ ಜೀವನವೆಂದು ಕರೆಯುತ್ತಾರೆ.

ಕಲಾವಿದನು ಒಂದು ಸುಂದರ ಚಿತ್ರ ಬಿಡಿಸುವ ಮೊದಲು ಅದು ಅವನ ಮನಸ್ಸಿನಲ್ಲಿ ಮೂಡುತ್ತದೆ. ವಸಂತ ಋತುವಿನಲ್ಲಿ ಮೈದುಂಬಿನಿಂತ ಹಚ್ಚ ಹಸಿರಾದ ಮಾಮರದ ಚಿತ್ರ ಬರೆಯಲು ಹೊರಟ ಕಲಾವಿದನು ಕೈಯಲ್ಲಿ ಕುಂಚ ಹಿಡಿದು ಒಂದೊಂದೇ ಬಿಂದುವನ್ನು ರೇಖೆಯನ್ನು ಇಡುತ್ತಾ ಹೋಗುತ್ತಾನೆ. ಆದರೆ ಇದೆ ಬಿಂದು. ಇದೆ ರೇಖೆ ಮುಂದೆ ಅಪ್ರತಿಮ ಸುಂದರ ಚಿತ್ರವಾಗಿ ನಿಲ್ಲುತ್ತದೆ. ಇದರ ಅರಿವು ಇರುವುದ–ರಿಂದಲೇ ಕಲಾವಿದನು ಆ ಬಿಂದು, ಆ ರೇಖೆ ತೆಗೆಯುವಾಗ ಮುಂದೆ ಮೂಡಲಿರುವ ಚಿತ್ರದ ಯಾವ ಅಂಗಾಂಶವೆಂದು ಯೋಚಿಸಿ ತುಂಬಾ ಎಚ್ಚರಿಕೆಯಿಂದ ಚಿತ್ರ ರಚನೆಗೆ ತೊಡಗುತ್ತಾನೆ. ಅಂತೆಯೇ ನೂರಾರು ಜನರಿಗೆ ಮೆಚ್ಚುಗೆಯಾಗುವಂತಹ ಚಿತ್ರವನ್ನು ಬಿಡಿಸುತ್ತಾನೆ. ಅದೇ ರೀತಿ ಒಬ್ಬ ಶಿಲ್ಪಿಯೂ ಕೂಡ ಕೈಯಲ್ಲಿ ಛಾಣ ಹಿಡಿದು ಮೂರ್ತಿ ಮಾಡಲು ತೊಡಗುತ್ತಾನೆ. ಆತನ ಕೈಛಾಣದ ಮೊದಲನೇ ಏಟು ಕಲ್ಲಿನ ಯಾವ ಭಾಗಕ್ಕೆ ಬೀಳಬೇಕೆಂಬುದನ್ನು ನೂರು ಸಲ ಯೋಚಿಸುತ್ತಾನೆ. ಬಳಿಕ ಒಂದೊಂದೇ ಏಟನ್ನು ಕೊಡುತ್ತಾ ಆ ಕಾಡುಗಲ್ಲಿನಲ್ಲಿ ಜಗತ್ತೇ ಬೆರಗಾಗುವಂತೆ ಮೂರ್ತಿಯನ್ನು ನಿರ್ಮಿಸುತ್ತಾನೆ.

ಹೀಗೆ ನಮ್ಮ ಭವಿಷ್ಯವು ವರ್ತಮಾನದ ಹೆಜ್ಜೆಗಳನ್ನು ಅವಲಂಬಿಸಿದೆ. ಆದ್ದರಿಂದ ನಾವು ಈ ಕ್ಷಣದ ಕಾಳಜಿ ತೆಗೆದುಕೊಂಡರೆ ಅದು ಮುಂದಿನ ಕ್ಷಣಗಳ ಕಾಳಕಿಯನ್ನು ತೆಗೆದುಕೊಳ್ಳುತ್ತದೆ. ಅಂತೆಯೇ ಒಬ್ಬ ಕವಿಯು "ಕರುಣಾಳು ಬಾ ಬೆಳಕೆ ಮುಸಿಕಿದ ಈ ಮಬ್ಬಿನಲ್ಲಿ ಕೈಹಿಡಿದು ನಡೆಸೆನ್ನನು!" ಎಂದು ದೇವರಲ್ಲಿ ಹೃದಯದುಂಬಿ ಪ್ರಾರ್ಥಿಸಿದ್ದನ್ನು ಕೇಳುತ್ತೇವೆ. ಜೀವನದ ಕಗ್ಗತ್ತಲೆಯಲ್ಲಿ ನಡೆಯುವಾಗ ಎಲ್ಲಿ ಹೋಗಬೇಕು? ಏನು ಮಾಡಬೇಕೆಂಬುದು ತಿಳಿಯದಂತಾಗುತ್ತದೆ. ಅಂತಹ ಕ್ಷಣದಲ್ಲಿ ಯಾರದರೂ ಒಂದು ಒಂದು ಒಂದೇ ಹೆಜ್ಜೆ ಸರಿಯಾದ ಮಾರ್ಗದಲ್ಲಿ ನಮ್ಮನ್ನು ಕೈಹಿಡಿದು ನಡೆಸಿದರೂ ಸಾಕು ನಾವು ಛಲದಿಂದ ಮುಂದುವರೆದು ಗುರಿಯನ್ನು ತಲುಪುತ್ತೇನೆ. ಹಾಗಲ್ಲದೆ ನಮ್ಮ ಮೊದಲನೆ ಹೆಜ್ಜೆಯನ್ನು ನಾವು ತಪ್ಪು ದಾರಿಯಲ್ಲಿಟ್ಟರೆ–ಮುಂದೆ ಪಡಬಾರದ ಕಷ್ಟ ಪಡಬೇಕಾಗುತ್ತದೆ.

ಒಂದು ಅರಣ್ಯದಲ್ಲಿ ಸುಂದರವಾದ ಬಾಳೆಯ ತೋಟ ಬೆಳೆದು ನಿಂತಿತ್ತು. ಅದರಿಂದ ಇಡೀ ಅರಣ್ಯಕ್ಕೆ ವಿಶೇಷ ಕಳೆ ಬಂದಿತ್ತು. ನೂರಾರು ಹಕ್ಕಿ ಪಕ್ಷಿಗಳು ಆ ಬಾಳೆಯ ತೋಟದಲ್ಲಿ ಆನಂದದ ಆಶ್ರಯ ಪಡೆದಿದ್ದು ಬಾಳೆಯ ತೋಟದ ಅರಳ ಸಾತ್ವಿಕ ಜೀವನವು ಅರಣ್ಯಕ್ಕೆ ಆದರ್ಶವಾಗಿತ್ತು. ಒಂದು ದಿನ ಅಲ್ಲಿಗೆ ರಟಗಳ್ಳಿಯ ಒಂದು ಎಲೆಯು ಬಂದಿತು. ಆ ಬಾಳೆಯ ತೋಟದ ರಾಜನನ್ನು ಎಂದರೆ ದೊಡ್ಡ ಬಾಳೆಯ ಗಿಡವನ್ನು ಕಂಡು ರಟಗಳ್ಳಿಯ ಎಲೆಯು ಹೀಗೆ ಕೇಳಿತು " ಮಹಾಪ್ರಭು ನಾನೊಬ್ಬ ಬಡಜೀವಿ. ನನಗೆ ಯಾರೂ ಆಶ್ರಯ ನೀಡುತ್ತಿಲ್ಲ. ನೀವಾದರೂ ಆಶ್ರಯ ನೀಡಿ ಉಪಕರಿಸಬೇಕು. ಇಲ್ಲದಿದ್ದರೆ ನಾನು ಬದುಕುವುದೇ ಇಲ್ಲ.!"

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಮೇ–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 862 | 627 | 433 | 308 | **2230** |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 129 | 104 | 15 | 62 | **310** |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 213 | 1 | 34 | 21 | **269** |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 778 | 730 | 414 | 349 | **2271** |
| **ಮೇ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 310 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 269** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7575 | 1461 | 2301 | 819 | **12156** |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1172 | 264 | 574 | 209 | **2219** |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6403 | 1197 | 1727 | 610 | **9937** |
| **ಮೇ 2026ರ ತಿಂಗಳಿನಲ್ಲಿ ಒಟ್ಟು 60 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ನೂತನ ಮುಖ್ಯಮಂತ್ರಿಯಾಗಿ ಶ್ರೀ ಡಿ. ಕೆ. ಶಿವಕುಮಾರ



ಕರ್ನಾಟಕ ರಾಜ್ಯದ 25ನೇಯ ನೂತನ ಮುಖ್ಯಮಂತ್ರಿಯಾಗಿ ದಿನಾಂಕ 03.06.2026 ರಂದು ಪ್ರಮಾಣ ವಚನ ಸ್ವೀಕರಿಸಿದ ಶ್ರೀ ಡಿ.ಕೆ. ಶಿವಕುಮಾರರವರು ಹಾಗೂ ಅವರ ಸಚಿವ ಸಂಪುಟದ ಎಲ್ಲ ಸದಸ್ಯರಿಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

ಶ್ರೀಯುತ ಡಿ.ಕೆ. ಶಿವಕುಮಾರರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಸಕ್ತ ರಾಮನಗರ ಜಿಲ್ಲೆಯ ಕನಕಪುರದ ದೊಡ್ಡಾಲಹಳ್ಳಿಯವರು. ತಂದೆ ಶ್ರೀ ಕೆಂಪೇಗೌಡ, ತಾಯಿ ಶ್ರೀಮತಿ ಗೌರಮ್ಮ, ಕೃಷಿ ಕುಟುಂಬ. ಬೆಂಗಳೂರಿನ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ. ಕನಕಪುರದಲ್ಲಿ ಪ್ರೌಢ ಶಿಕ್ಷಣ ಮುಗಿಸಿದ ನಂತರ ಬೆಂಗಳೂರಿನ ಆರ್.ಸಿ ಕಾಲೇಜನಲ್ಲಿ ಬಿ.ಕಾಂ ಪದವಿ ಮುಂದೆ ರಾಜಕಾರಣ ಸೇರಿದ ಮೇಲೆ ಮೈಸೂರು ಮುಕ್ತ ವಿಶ್ವ ವಿದ್ಯಾಲಯದಲ್ಲಿ ರಾಜ್ಯ ಶಾಸ್ತ್ರದಲ್ಲಿ ಎಮ್.ಎ. ಸ್ನಾತಕೋತ್ತರ ಪದವಿ ಪಡೆದುಕೊಂಡರು. ಉದ್ಯಮ, ಶಿಕ್ಷಣ ಹಾಗೂ ಸಮಾಜದ ಅಭಿವೃದ್ಧಿಗಾಗಿ ಹಲವಾರು ಪ್ರಗತಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕ್ಷೇತ್ರದಲ್ಲಿ ಸಂಸ್ಕೃತ ಶ್ಲೋಕಗಳನ್ನು ಹಾಗೂ ವಚನಗಳನ್ನು ನಿರಂತರ ಅಧ್ಯಯನ ಮಾಡುವ ಶ್ರೀಯುತರು ಮನೆಯಲ್ಲಿಯೇ ಒಂದು ಪುಸ್ತಕ ಗ್ರಂಥಾಲಯವನ್ನಯಿಟ್ಟುಕೊಂಡಿದ್ದಾರೆ. ತುಂಬಿದ ಕೆಲಸದ ಒತ್ತಡದಲ್ಲಿಯೂ ಸಮಯ ಮಾಡಿಕೊಂಡು ಅಧ್ಯಯನ ಮಾಡುವ ಪ್ರವೃತ್ತಿ ಅವರದು. ಪ್ರತಿದಿನವೂ ಒಂದು ಗಂಟೆ ದೇವರ ಪೂಜೆ. ಆರೋಗ್ಯದ ಪೂರ್ಣ ಕಾಳಜಿ. ನಿತ್ಯ ದೈಹಿಕ ಕಸರತ್ತು ಮಾಡುತ್ತಾರೆ. ಶುದ್ಧ ಶಾಖಾಹಾರಿ, ಕಾಲೇಜು ವ್ಯಾಸಂಗದಿಂದಲೇ ನಾಯಕತ್ವವನ್ನು ರೂಡಿಸಿಕೊಂಡವರು. ಯುವ ಕಾಂಗ್ರೆಸ್ ಸೇರಿದರು. ಯುವ ಕಾಂಗ್ರೆಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಅನೇಕ ಜನಪರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡವರು.

ಶ್ರೀಯುತರು 8 ಬಾರಿ ಶಾಸಕರಾಗಿ 5 ಬಾರಿ ಸಚಿವರಾಗಿ 2001 ರಲ್ಲಿ ಶ್ರೀಯುತ ಎಸ್. ಎಮ್ ಕೃಷ್ಣಾ ಮಂತ್ರಿಮಂಡಳದಲ್ಲಿ ಸಹಕಾರ ಸಚಿವರಾಗಿ ಸೇವೆ ಸಲ್ಲಿಸಿದ ಶ್ರೀಯುತರು 2001 ರಲ್ಲಿ ಕೋ–ಆಪರೇಟಿವ್ ಇನ್ ನ್ಯೂ ಮಿಲ್ಲೆನಿಯಮ್ ಎಂಬ ರಾಜ್ಯ ಮಟ್ಟದ ಸಹಕಾರ ಸಮ್ಮೇಳನವನ್ನು ಜರುಗಿಸಿದ್ದು ಸಹಕಾರಿಗಳಿಗೆ ಇನ್ನೂ ಹೆಚ್ಚು ಹಸಿರಾಗಿಯೇ ಉಳಿದಿದೆ. ಇವರು ಸಹಕಾರ ಸಚಿವರಾಗಿದ್ದಾಗಲೇ ಸೌಹಾರ್ದ ಸಹಕಾರಿ ಕಾಯ್ದೆ 01.01.2001 ರಿಂದ ಜಾರಿ ಮಾಡಿರುವುದು ಸೌಹಾರ್ದ ಸಹಕಾರಿಗಳಿಗೆ ಹೆಮ್ಮೆಯ ವಿಷಯ.

ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ಈಗ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಶ್ರೀ ಡಿ.ಕೆ. ಶಿವಕುಮಾರರವರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಶುಭ ಹಾರೈಕೆಗಳು ಇವರ ಅಧಿಕಾರಾವಧಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಲಿ ಎಂದು ಆಶಿಸುತ್ತೇವೆ.

## ಸಂಯುಕ್ತ ಸಹಕಾರಿಯ ಅರ್ಹ ಹಾಗೂ ಅನರ್ಹ ಮತದಾರರ ಪಟ್ಟಿ ಪ್ರಕಟಣೆ

31.03.2026ಕ್ಕೆ ಇದ್ದಂತೆ ಅರ್ಹ ಮತ್ತು ಅನರ್ಹ ಮತದಾರರ ಪಟ್ಟಿಯನ್ನು ದಿನಾಂಕ 21.04.2026 ರಂದು ಸಂಯುಕ್ತ ಸಹಕಾರಿಯ ವೇಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 08.06.2026 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಹಕರುಗಳ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.
2. ದಿನಾಂಕ 23.06.2026 ಮತ್ತು 24.06.2026 ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ 2 ದಿನಗಳ "ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ ತರಬೇತಿಯನ್ನು "ಸೌಹಾರ್ದ ಸಹಕಾರಿ ಸೌಧ", ಮಾರ್ಗೋಸ ರಸ್ತೆ, ಮಲ್ಲೇಶ್ವರ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
3. ದಿನಾಂಕ 06.07.2026 ರಿಂದ 12.07.2026 ರವರೆಗೆ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಅನ್ನು ಹಮ್ಮಿಕೊಳ್ಳಲಾಗುವುದು.
4. ದಿನಾಂಕ 01.07.2026 ರಿಂದ 6 ತಿಂಗಳ ಪುನರ್‌ವಿಮರ್ಶಿತ ಸಹಕಾರ ಮತ್ತು ಬ್ಯಾಂಕಿಂಗ್ ಮೆನೇಜ್‌ಮೆಂಟ್ ಕೋರ್ಸ್ ಪ್ರಾರಂಭಿಸಲಾಗುತ್ತಿದೆ.

## ಕರ್ನಾಟಕ ಸರ್ಕಾರದ ನೂತನ ಸಚಿವ ಸಂಪುಟದ ಸಚಿವರು



**ಡಾ. ಜಿ. ಪರಮೇಶ್ವರ್**
ಮಾನ್ಯ ಉಪ ಮುಖ್ಯಮಂತ್ರಿ
ಕಂದಾಯ ಹಾಗೂ ಕ್ರೀಡಾ ಸಚಿವರು



**ಶ್ರೀ ಕೆ.ಹೆಚ್. ಮುನಿಯಪ್ಪ**
ಮಾನ್ಯ ಆಹಾರ ಮತ್ತು ನಾಗರಿಕ
ಸರಬರಾಜು ಸಚಿವರು



**ಶ್ರೀ ಕೆ. ಜೆ. ಜಾರ್ಜ್**
ಮಾನ್ಯ ಇಂಧನ ಹಾಗೂ
ಪ್ರವಾಸೋದ್ಯಮ ಸಚಿವರು




**ಶ್ರೀ ಎಂ. ಬಿ. ಪಾಟೀಲ್**
ಮಾನ್ಯ ಬೃಹತ್ ಕೈಗಾರಿಕೆ
ಸಚಿವರು



**ಶ್ರೀ ರಾಮಲಿಂಗಾ ರೆಡ್ಡಿ**
ಮಾನ್ಯ ಸಚಿವರು



**ಶ್ರೀ ಸತೀಶ್ ಜಾರಕಿಹೊಳಿ**
ಮಾನ್ಯ
ಲೋಕೋಪಯೋಗಿ
ಸಚಿವರು



**ಶ್ರೀ ಕೃಷ್ಣ ಬೈರೇಗೌಡ**
ಮಾನ್ಯ ಬೆಂಗಳೂರು
ನಗರಾಭಿವೃದ್ಧಿ
ಸಚಿವರು



**ಶ್ರೀ ಪ್ರಿಯಾಂಕ್ ಖರ್ಗೆ**
ಮಾನ್ಯ ಗೃಹ
ಹಾಗೂ ಐಟಿಬಿಟಿ
ಸಚಿವರು



**ಶ್ರೀ ಯು. ಟಿ. ಖಾದರ್**
ಮಾನ್ಯ ಆರೋಗ್ಯ ಮತ್ತು
ಕುಟುಂಬ ಕಲ್ಯಾಣ
ಸಚಿವರು



**ಶ್ರೀ ಈಶ್ವರ್ ಖಂಡ್ರೆ**
ಮಾನ್ಯ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್
ರಾಜ್ ಸಚಿವರು






**ಶ್ರೀ ಯತೀಂದ್ರ ಸಿದ್ದರಾಮಯ್ಯ**
ಮಾನ್ಯ ನಗರಾಭಿವೃದ್ಧಿ
ಸಚಿವರು



**ಶ್ರೀ ಬೈರತಿ ಸುರೇಶ್**
ಮಾನ್ಯ ಸಾರಿಗೆ
ಸಚಿವರು



**ಶ್ರೀ ಶರಣ ಪ್ರಕಾಶ ಪಾಟೀಲ್**
ಮಾನ್ಯ ವೈದ್ಯಕೀಯ ಶಿಕ್ಷಣ
ಸಚಿವರು



**ನೂತನ ಸಚಿವರುಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹಾರ್ದಿಕ ಶುಭಾಶಯಗಳು**



## ವಿಶ್ವ ಪರಿಸರ ದಿನಾಚರಣೆ

ಜೂನ್ 05ರ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ರಾಜ್ಯದ ಪ್ರತಿಯೊಂದು ಸೌಹಾರ್ದ ಸಹಕಾರಿಗಳು ಪರಿಸರ ಸಂರಕ್ಷಣೆ ಹಾಗೂ ಹಸಿರು ವಾತಾವರಣ ನಿರ್ಮಾಣದ ಉದ್ದೇಶದಿಂದ ಕನಿಷ್ಠ 5 ಸಸಿಗಳನ್ನು ನೆಟ್ಟು ಪರಿಸರ ಜಾಗೃತಿಯನ್ನು ನೀಡುವ ಜೊತೆಗೆ ಅವು ಮರಗಳಾಗಿ ಬೆಳೆದು ಅಭಿವೃದ್ಧಿಯಾಗುವವರೆಗೆ ಸಮರ್ಪಕವಾಗಿ ಪೋಷಣೆ ಹಾಗೂ ಆರೈಕೆ ಮಾಡುವ ಜವಾಬ್ದಾರಿಯನ್ನು ಸಹ ವಹಿಸಬೇಕೆಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಮನವಿ ಮಾಡಿರುತ್ತಾರೆ.

# ಕೌಶಲ್ಯ ಅಭಿವೃದ್ಧಿ ಹಾಗೂ ವೃತ್ತಿಪರತೆ ತರಬೇತಿ ಕಾರ್ಯಕ್ರಮ



ಉದ್ಘಾಟನೆ




ಗಣ್ಯರೊಂದಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು

**ಕಾರ್ಕಳ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಿನಾಂಕ 22.05.2026 ರಿಂದ 24.05.2026 ವರೆಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಕೌಶಲ್ಯ ಅಭಿವೃದ್ಧಿ ಹಾಗೂ ವೃತ್ತಿಪರತೆ ತರಬೇತಿ ಕಾರ್ಯಕ್ರಮವನ್ನು "ರಾಜೇಶ್ವರಿ ನ್ಯಾಷನಲ್ ಸ್ಕೂಲ್" ಕಾರ್ಕಳ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಪ್ರಾರ್ಥನೆಯನ್ನು ರಾಜೇಶ್ವರಿ ನ್ಯಾಷನಲ್ ಸ್ಕೂಲ್ ಇದರ ವಿದ್ಯಾರ್ಥಿನಿಯಾದ ಕುಮಾರಿ ಶ್ರೀ ಲಕ್ಷ್ಮೀ ಇವರು ನಡೆಸಿಕೊಟ್ಟರು.

ತರಬೇತಿ ಕಾರ್ಯಕ್ರಮದ ನಿರೂಪಣೆಯನ್ನು ತರಬೇತಿ ವಿಭಾಗದ ಅಧಿಕಾರಿಯವರಾದ ಶ್ರೀಮತಿ ಕವಿತಾ. ಆರ್ ಇವರು ನಡೆಸಿಕೊಟ್ಟರು. ತರಬೇತಿ ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ನಡೆಸಿಕೊಟ್ಟರು.

ತರಬೇತಿಯ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನಡೆಸಿಕೊಟ್ಟರು. ತರಬೇತಿ ಕಾರ್ಯಕ್ರಮದ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿ.ಎ ಇವರು ವಹಿಸಿದ್ದರು. ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ಎಸ್. ಕೆ ಇವರು ವಹಿಸಿದ್ದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಎ ಆರ್. ಪ್ರಸನ್ನ ಕುಮಾರ್, ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಹಾಗೂ ರಾಜೇಶ್ವರಿ ನ್ಯಾಷನಲ್ ಸ್ಕೂಲ್ ನ ಮಾನ್ಯ ಅಧ್ಯಕ್ಷರಾದ ಶ್ರೀ ದೇವಿ ಪ್ರಸಾದ್ ಶೆಟ್ಟಿ ಇವರು ವಹಿಸಿದ್ದರು. ತರಬೇತಿಯ ಸಂಪನ್ಮೂಲ ವ್ಯಕ್ತಿಯವರಾದ ಶ್ರೀ ಹೆಚ್ ಎಸ್. ನಾಗರಾಜಯ್ಯ ಮಾನ್ಯ ಅಪರ ನಿಬಂಧಕರು (ನಿ) ಬೆಂಗಳೂರು. ಇವರು ಉಪಸ್ಥಿತರಿದ್ದರು.

## ಸಿಬ್ಬಂದಿಗಳು ವ್ಯಕ್ತಿ ನಿಷ್ಠರಾಗದೆ, ಸಂಸ್ಥೆ ನಿಷ್ಠರಾಗಬೇಕು :
## ಶ್ರೀ ಜಿ. ನಂಜನಗೌಡ ಸಿ.ಎ, ಮಾನ್ಯ ಅಧ್ಯಕ್ಷರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಉತ್ತಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಆಡಳಿತ ವ್ಯವಸ್ಥೆಯ ತಪ್ಪುಗಳನ್ನು ಹುಡುಕಿ ಸರಿಪಡಿಸುವ ಜವಾಬ್ದಾರಿ ಸಿಬ್ಬಂದಿಯವರದಾಗಿದೆ. ಆದರಿಂದ ಸಿಬ್ಬಂದಿಗಳು ವ್ಯಕ್ತಿಗೆ ನಿಷ್ಠರಾಗದೆ, ಸಂಸ್ಥೆಗೆ ನಿಷ್ಠರಾಗಬೇಕು ಉತ್ತಮವಾದ ಜವಾಬ್ದಾರಿಯುತ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು.

ಮಾನವ ಸಮಾಜ ಜೀವಿ, ಸಮಾಜದಲ್ಲಿ ಪರಸ್ಪರ ಸಹಾಯ, ಸಹಕಾರ ಬಹಳ ಪ್ರಮುಖವಾದದ್ದು. ಜೀವನದಲ್ಲಿ ಏನಾದರು ಸಾಧನೆ ಮಾಡಬೇಕಾದರೆ ತರಬೇತಿ ಮತ್ತು ಶಿಕ್ಷಣ ಬಹಳ ಮಹತ್ವದಾಗಿದೆ. ಇಂತಹ ಹಚ್ಚ ಹಸಿರು, ರಮ್ಯವಾದ ಪರಿಸರದಲ್ಲಿ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ತುಂಬಾ ಸಂತೋಷವಾಗಿದೆ. ಈ ಉತ್ತಮ ಪರಿಸರದಲ್ಲಿ ತರಬೇತಿಗಳನ್ನು ಆಯೋಜಿಸಿರುವುದು ಹೊಸ ಅನುಭವ ಹಾಗೂ ಪ್ರೇರಣೆ ಪಡೆಯಲು ಹೆಚ್ಚು ಉಪಯುಕ್ತವಾಗಿದೆ. ನಾವೆಲ್ಲ ಒಂದು ಮನೆಯ ಮಕ್ಕಳಂತೆ ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ನಿಷ್ಠೆ ಹಾಗೂ ಜವಾಬ್ದಾರಿಯುತವಾಗಿ ನಿರ್ವಹಿಸಬೇಕು. ಆಗ ಸಂಸ್ಥೆಯು ಉನ್ನತ ಮಟ್ಟಕ್ಕೆ ಕೊಂಡ್ಯೊಯಲು ಸಾಧ್ಯ ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಸಿಬ್ಬಂದಿಗಳಿಗೆ ಮಾರ್ಗದರ್ಶನ ಮಾಡಿದರು.



## ಭರತನಾಟ್ಯ ಕಾರ್ಯಕ್ರಮ

ದಿನಾಂಕ 22.05.2026 ರಂದು "ರಾಜೇಶ್ವರಿ ನ್ಯಾಷನಲ್ ಸ್ಕೂಲ್" ಕಾರ್ಕಳ ಶಾಲೆಯ ವಿದ್ಯಾರ್ಥಿನಿ ಇವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



**ಸಂಸ್ಥೆ ಬೆಳವಣಿಗೆಗೆ ಸಿಬ್ಬಂದಿಯವರ ಪಾತ್ರ ಪ್ರಮುಖ : ಶ್ರೀ ಎ ಆರ್. ಪ್ರಸನ್ನ ಕುಮಾರ್, ಮಾನ್ಯ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಧೈರ್ಯ, ಶಕ್ತಿಶಾಲಿಗಳನ್ನಾಗಿ ಮಾಡುವಲ್ಲಿ ಈ ತರಬೇತಿ ಕಾರ್ಯಕ್ರಮ ತುಂಬಾ ಉಪಯುಕ್ತವಾಗಲಿದೆ ಹಾಗೂ ಈ ತರಬೇತಿಯ ಉದ್ದೇಶ ಸಿಬ್ಬಂದಿಗಳಿಗೆ ಹೊಸ ಹೊಸ ಕೌಶಲ್ಯವನ್ನು ಬೆಳಸಿಕೊಂಡು ಉತ್ತಮವಾಗಿ ಹಾಗೂ ಪ್ರಾಮಾಣಿಕವಾಗಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವುದಾಗಿದೆ. ಆರಂಭದಲ್ಲಿ 3 ಜನ ಸಿಬ್ಬಂದಿಗಳಿಂದ ಪ್ರಾರಂಭವಾದ ಸಂಸ್ಥೆ ಇಂದು 137 ಸಿಬ್ಬಂದಿಗಳನ್ನು ಹೊಂದಿದೆ, ಸಂಸ್ಥೆ ಬೆಳವಣಿಗೆಗೆ ಸಿಬ್ಬಂದಿಗಳು ಪಾತ್ರ ಬಹಳ ಪ್ರಮುಖವಾದದು ಈ ತರಬೇತಿಯಲ್ಲಿ ಅಳವಡಿಸಿರುವ ವಿಷಯಗಳು ಸಿಬ್ಬಂದಿಗಳಿಗೆ ಉಪಯುಕ್ತ ಹಾಗೂ ಅನುಕೂಲವಾಗುವಂತ ವಿಷಯಗಳಾಗಿವೆ. ತಮ್ಮ ಕೆಲಸ ಕಾರ್ಯಗಳಲ್ಲಿ ಪ್ರಬುದ್ಧತೆಯನ್ನು ಬೆಳಸಿಕೊಂಡು ಕೆಲಸ ನಿರ್ವಹಿಸಬೇಕೆಂಬುವುದು ಆಡಳಿತ ಮಂಡಳಿಯ ಅಪೇಕ್ಷೆಯಾಗಿದೆ ಎಂದು ಸಿಬ್ಬಂದಿಗಳಿಗೆ ಮಾರ್ಗದರ್ಶನ ಮಾಡಿದರು.

---

**ಸಿಬ್ಬಂದಿಗಳು ಸ್ಮಾರ್ಟ್ ಆಗಿ ಕೆಲಸ ಕಾರ್ಯಗಳಿಗೆ ಒತ್ತು ನೀಡಬೇಕು : ಶ್ರೀ ಮಂಜುನಾಥ್ ಎಸ್.ಕೆ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



ಸಿಬ್ಬಂದಿಗಳು ಶಿಸ್ತು ಹಾಗೂ ಪ್ರಾಮಾಣಿಕವಾಗಿ ಕೆಲಸ ಕಾರ್ಯ ಮಾಡುವುದಲ್ಲದೇ ಸ್ಮಾರ್ಟ್ ಆಗಿ ಕೆಲಸ ಕಾರ್ಯಗಳನ್ನು ಮಾಡುವಂತ ಕೌಶಲ್ಯವನ್ನು ಬೆಳಸಿಕೊಳ್ಳಲು ಈ ತರಬೇತಿ ಕಾರ್ಯಕ್ರಮ ಸಹಾಯಕವಾಗಿದೆ, ಇಂತಹ ಸುಂದರವಾದ ವಾತಾವರಣದಲ್ಲಿ ಈ ತರಬೇತಿ ಆಯೋಜಿಸಿರುವುದು ನಮ್ಮಗೆ ತುಂಬಾ ಸಂತೋಷವಾಗಿದೆ. ಶಿಸ್ತು ಹಾಗೂ ಪ್ರಾಮಾಣಿಕ ಕೆಲಸದ ಜೊತಗೆ ಆತ್ಮ ವಿಶ್ವಾಸವನ್ನು ಬೆಳಸಿಕೊಂಡು ಸದಸ್ಯ ಸಂಸ್ಥೆಗಳೊಂದಿಗೆ ಉತ್ತಮ ಮಾರ್ಗದರ್ಶನ ಮಾಡಬೇಕು ಎಂದು ಅಧ್ಯಕ್ಷತೆಯನ್ನು ವಹಿಸಿ ಸಿಬ್ಬಂದಿಗಳಿಗೆ ಮಾರ್ಗದರ್ಶನ ಮಾಡಿದರು.

---



**ಸಿಬ್ಬಂದಿಯವರನ್ನು ಪ್ರೀತಿಯಿಂದ ಕಾಣಬೇಕು : ಶ್ರೀಮತಿ ಭಾರತಿ ಜಿ. ಭಟ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ನಮ್ಮ ಸಿಬ್ಬಂದಿಗಳು ಪ್ರಾಮಾಣಿಕವಾಗಿ ಹಾಗೂ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುತ್ತಿರುವುದನ್ನು ನೋಡಿ ಬಹಳ ಸಂತೋಷವಾಗುತ್ತಿದೆ ಹಾಗೂ ಸಿಬ್ಬಂದಿಗಳು ಆತ್ಮವಿಶ್ವಾಸದ ಜೊತೆಗೆ ಉತ್ತಮವಾದ ಸಂಸ್ಕೃತಿಯನ್ನು ಬೆಳಸಿಕೊಂಡಿದ್ದಾರೆ. ಈ ತರಬೇತಿಗಳಿಂದ ಇನ್ನೂ ಹೆಚ್ಚು ಉತ್ತಮ ಜ್ಞಾನ & ಮಾರ್ಗದರ್ಶನ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

---

**ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು : ಶ್ರೀ ಸದಾಶಿವ ಶೆಟ್ಟಿ, ಮಾನ್ಯ ಮಾಜಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಸಂಸ್ಥೆ ಬೆಳೆಸುವಲ್ಲಿ ಅವರ ಪ್ರಾಮಾಣಿಕ ಕರ್ತವ್ಯ ಹಾಗೂ ಜವಾಬ್ದಾರಿಗಳು ಪಾತ್ರ ಬಹಳ ಪ್ರಮುಖವಾಗಿದೆ. ಈ ತರಬೇತಿಗಳಿಂದ ಹೊಸ ಹೊಸ ಕೌಶಲ್ಯವನ್ನು ಬೆಳಸಿಕೊಂಡು ಸದಸ್ಯ ಸಂಸ್ಥೆಗಳಿಗೆ ಉತ್ತಮ ಮಾರ್ಗದರ್ಶನ ಮಾಡಬೇಕು ಎಂದು ಸಿಬ್ಬಂದಿಗಳಿಗೆ ಮಾರ್ಗದರ್ಶನ ಮಾಡಿದರು.

---



**ಸಹಕಾರಿ ಸಂಸ್ಥೆಗಳ ಮೂಲಕ ಆರ್ಥಿಕವಾಗಿ, ಸಮಾಜಿಕ ಬೆಳವಣಿಗೆ : ಶ್ರೀ ದೇವಿ ಪ್ರಸಾದ್ ಶೆಟ್ಟಿ, ಮಾನ್ಯ ಅಧ್ಯಕ್ಷರು, ರಾಜೇಶ್ವರಿ ನ್ಯಾಷನಲ್ ಸ್ಕೂಲ್, ಕಾರ್ಕಳ**

ಸಂಯಕ್ತ ಸಹಕಾರಿಗಳ ಸಿಬ್ಬಂದಿಗಳ ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿ ಪರತೆ ತರಬೇತಿಯನ್ನು ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿರುವುದು ನಮಗೆ ತುಂಬಾ ಸಂತೋಷವಾಗಿದೆ. ಈ ತರಬೇತಿಯ ಬಹಳ ಮೌಲ್ಯಯುತವಾಗಿದೆ. ದಕ್ಷಣ ಕನ್ನಡ ಜಿಲ್ಲೆಯಲ್ಲಿರುವ ಸಂಸ್ಥೆಗಳು ಸಾಲ ಕೊಡುವ ಸಂಸ್ಥೆಗಳಾಗಿವೆ. ಅತಿ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಟ್ಟು ಬಡವರಿಗೆ ಆರ್ಥಿಕವಾಗಿ, ಸಾಮಾಜಿಕ ಬೆಳವಣಿಗೆಗೆ ಸಹಾಯಕವಾಗಿವೆ. ಇನ್ನೂ ಹೆಚ್ಚು ಈ ಇಂತಹ ತರಬೇತಿಗಳನ್ನು ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿ ಅದಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ನೀಡುತ್ತೇವೆ ಎಂದು ಹೇಳಿದರು.

## ಸಿಬ್ಬಂದಿಗಳು ಪ್ರಚಲಿತ ವಿದ್ಯಮಾನಗಳನ್ನು ಹಾಗೂ ಕೌಶಲ್ಯ ಮತ್ತು ವೃತ್ತಿ ಪರತೆಯನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು :

### ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಸಂಯುಕ್ತ ಸಹಕಾರಿಯು ತನ್ನ ಸಿಬ್ಬಂದಿಗಳಿಗಾಗಿ ಪ್ರತಿ ವರ್ಷದಂತೆ ಈ ವರ್ಷವು ಕೂಡ ಕೌಶಲ್ಯ ಅಭಿವೃದ್ಧಿ ಹಾಗೂ ವೃತ್ತಿಪರತೆ ತರಬೇತಿಯನ್ನು ರಾಜೇಶ್ವರಿ ನ್ಯಾಷನಲ್ ಸ್ಕೂಲ್ ಕಾರ್ಕಳ ಉಡುಪಿ ಇಲ್ಲಿ ಆಯೋಜಿಸಿದ್ದು, ತುಂಬಾ ಸಂತೋಷವಾಗಿದೆ. ಎಲ್ಲಾ ಸಿಬ್ಬಂದಿಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಕೌಶಲ್ಯತೆ ಹಾಗೂ ನೈಪುಣ್ಯತೆ ಬೆಳಸಿಕೊಳ್ಳಬೇಕು. ಪ್ರಸ್ತುತ ವಿದ್ಯಮಾನಗಳು, ಇಲಾಖೆಯ ಬದಲಾವಣೆಯ ವಿಷಯಗಳು ಹಾಗೂ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಈ ತರಬೇತಿ ಕಾರ್ಯಕ್ರಮ ಎಲ್ಲಾ ಸಿಬ್ಬಂದಿಗಳಿಗೆ ಪ್ರೇರಣೆ ಮತ್ತು ಪ್ರೋತ್ಸಾಹದಾಯಕವಾಗಿದೆ ಹಾಗೂ ಇಂತಹ ಉತ್ತಮವಾದ ಪರಿಸರದಲ್ಲಿ ರಾಜೇಶ್ವರಿ ಶಿಕ್ಷಣ ಸಂಸ್ಥೆಯವರು ತುಂಬಾ ಅಚ್ಚುಕಟ್ಟಾಗಿ ವ್ಯವಸ್ಥೆಯ ನಿರ್ವಹಿಸಿದ್ದಾರೆ ಅವರಿಗೆ ಅಭಿನಂದನೆಗಳನ್ನು ತಿಳಿಸಿದರು ಹಾಗೂ ಎಲ್ಲ ಸಿಬ್ಬಂದಿಗಳು ಪ್ರಾಮಾಣಿಕವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಪನ್ಮೂಲ ವ್ಯಕಿಗಳಾದ ಶ್ರೀ ಹೆಚ್.ಎಸ್. ನಾಗರಾಜಯ್ಯ ಮಾನ್ಯ ಅಪರ ನಿಬಂಧಕರು (ನಿ) ಬೆಂಗಳೂರು. ಇವರು ಉಪಸ್ಥಿತರಿದ್ದರು. ಈ ತರಬೇತಿ ಕಾಯಕ್ರಮದಲ್ಲಿ 122 ಸಿಬ್ಬಂದಿಗಳು ಭಾಗವಹಿಸಿದ್ದರು. ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಯವರಾದ ಶ್ರೀ ಸೂರ್ಯಕಾಂತ್ ರ್‍ಯಾಕಲೆ ಇವರು ನಡೆಸಿಕೊಟ್ಟರು.



ನವಮೈತ್ರಿ ಸೌಹಾರ್ದ ಸಹಕಾರಿ ಭೇಟಿ



ಪಡುಬಿದ್ರಿ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಭೇಟಿ



ಶ್ರೀ ದೇವಿ ಪ್ರಸಾದ್ ಶೆಟ್ಟಿ ಇವರಿಗೆ ಸನ್ಮಾನ

ದಿನಾಂಕ 23.05.2026ರಂದು ಮಧ್ಯಾಹ್ನ ನವಮೈತ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ಸಂಘ ನಿ., ಶಿರ್ತಾಡಿಗೆ ಭೇಟಿ ನೀಡಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ತಿಳಿದುಕೊಳ್ಳಲಾಯಿತ್ತು. ಸಂಜೆ ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆಯಲಾಯಿತು.

ದಿನಾಂಕ 24.05.2026ರಂದು ಅಧ್ಯಯನ ಪ್ರವಾಸವನ್ನು ಕೈಗೊಳ್ಳಲಾಯಿತು. ಪಡುಬಿದ್ರಿ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಭೇಟಿ ನೀಡಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ನಂತರ ಉಚ್ಚಿಲ ಮಹಾಲಕ್ಷ್ಮೀ ದೇವಸ್ಥಾನ, ಕಾಪುವಿನಲ್ಲಿ ಮಾರಿಗುಡಿ ಹಾಗೂ ಉಡುಪಿ ಶ್ರೀ ಕೃಷ್ಣ ಮಠಕ್ಕೆ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆಯಲಾಯಿತು.

**ಈ ತರಬೇತಿ ಕಾರ್ಯಕ್ರಮದಲ್ಲಿ ಅಳವಡಿಸಿರುವ ವಿಷಯಗಳು:**

ಶಾಸನಬದ್ಧ ಪರಿವೀಕ್ಷಣೆಯಲ್ಲಿ ಗಮನಿಸಬೇಕಾದ ಅಂಶಗಳು, ಕಛೇರಿ ಹಾಗೂ ಕಡತಗಳ ನಿರ್ವಹಣೆ – ಶ್ರೀ ಹೆಚ್.ಎಸ್ ನಾಗರಾಜಯ್ಯ ಮಾನ್ಯ ಅಪರ ನಿಬಂಧಕರು(ನಿ) ಬೆಂಗಳೂರು. ಸಂಯುಕ್ತ ಸಹಕಾರಿಯ ಎಲ್ಲಾ ವಿಭಾಗದ ಕಾರ್ಯಗಳಲ್ಲಿ ಎಐ ಅಳವಡಿಸುವಿಕೆ ಹಾಗೂ ಅದರ ಲಾಭಗಳು – ಶ್ರೀ ಮುಕುಂದ ರಾವತ್, ಮಾನ್ಯ ಸಾಫ್ಟ್‌ವೇರ್ ಎಐ ಟ್ರೇನರ್, ಬೆಂಗಳೂರು. ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನಾ ವರದಿ ಪರಿಶೀಲನೆ ಹಾಗೂ ಅಡಾವೆ ತಃಖ್ತೆ ವಿಮರ್ಶೆ– ಶ್ರೀ ಉಮೇಶ್ ರಾವ್, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಕಾರ್ಕಳ ಹಾಗೂ ಶ್ರೀ ನಾರಾಯಣ ಹೆಗಡೆ, ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ದೃಷ್ಟಿ 2030 – ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಹೊಸ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಪ್ರಾರಂಭಿಸುವುದು ಹೇಗೆ? – ಶ್ರೀ ಶ್ರೀಧರ್, ಮಾನ್ಯ ಸಹ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ವೃತ್ತಿ ಸಂಸ್ಕೃತಿ & ಸಮಯ ನಿರ್ವಹಣೆ ಹಾಗೂ ಸ್ಮಾರ್ಟ್ ವರ್ಕ್, ಪರಿಣಾಮಕಾರಿ ಸಂವಹನ & ಪ್ರೇರಣಾತ್ಮಕ ವಿಷಯಗಳು –ಶ್ರೀ ಶ್ರೀಷ. ಕೆ.ಎಂ, ಮಾನ್ಯ ಕಾರ್ಪೋರೇಟ್ ಟ್ರೇನರ್, ಮಂಗಳೂರು. ಸಮಾಪನೆ ಪ್ರಕ್ರಿಯೆ –ಶ್ರೀ ಶಿವಕುಮಾರ ಬಿರಾದರ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಶ್ರೀ ರವಿಕುಮಾರ್ ಕೆ.ಆರ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಇವರುಗಳು ಉಪನ್ಯಾಸ ನೀಡಿದರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಧಾರವಾಡ** : ದಿನಾಂಕ 15.05.2025 ರಂದು ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿಯನ್ನು ಕೆ.ಎಮ್.ಎಫ್. ತರಬೇತಿ ಕೇಂದ್ರ ರಾಯಪುರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಶ್ರೀದೇವಿ ಕುಲಕರ್ಣಿ, ಸಹಕಾರ ಅಭಿವೃದ್ಧಿ ಅಧಿಕಾರಿಗಳು ನವಲಗುಂದ ಹಾಗೂ ಶ್ರೀಮತಿ ರೇಷ್ಮಾ ಮಖಂದಾರ್ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಹುಬ್ಬಳ್ಳಿ ಇವರು ಉಪಸ್ಥಿತರಿದ್ದರು.

ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಜಿ.ಕೆ ರಾಮಪ್ಪ, ಉಪ ನಿರ್ದೇಶಕರು(ನಿ) ಲೆಕ್ಕಪರಿಶೋಧನಾ ಇಲಾಖೆ, ಇವರು ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು ಮತ್ತು ಎರಡನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯು ಹೊರಡಿಸಿರುವ ಸುತ್ತೋಲೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಮಾಹಿತಿ ನೀಡಿದರು. ಸಭೆಯ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕುಂಬಾರ ನೇರವೇರಿಸಿದರು. ತರಬೇತಿಯಲ್ಲಿ ಒಟ್ಟು 69 ಸಹಕಾರಿಗಳಿಂದ 86 ಜನ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದರು.

---



**ಹಾವೇರಿ** : ದಿನಾಂಕ 18-05-2026 ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ವೈವಿಧ್ಯ ಹೋಟೆಲ್, ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ಇವರು ನೆರವೇರಿಸಿದರು. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಜಿ.ಕೆ ರಾಮಪ್ಪ , ಉಪ ನಿರ್ದೇಶಕರು (ನಿ), ಲೆಕ್ಕಪರಿಶೋಧನಾ ಇಲಾಖೆ ಇವರು ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು ಮತ್ತು ಎರಡನೇ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ಸಂತೋಷ್ ಬಸಣ್ಣನವರ ಇವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರವೀಣ ಬಾಕಿ ಇವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ತರಬೇತಿಯಲ್ಲಿ ಒಟ್ಟು 77 ಸಹಕಾರಿಗಳಿಂದ 93 ಜನ ಭಾಗವಹಿಸಿ ಸಭೆಯ ಪ್ರಯೋಜನವನ್ನು ಪಡೆದರು.

---



**ಉತ್ತರ ಕನ್ನಡ** : ದಿನಾಂಕ 19-05-2026 ರಂದು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ತಾಲ್ಲೂಕುಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಮಂದಾರ ಎಲೈಟ್, ಕುಮಟಾ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ಜೆ ನಾಯಕ ರವರು ದೀಪ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಜಿ.ಕೆ ರಾಮಪ್ಪ, ಉಪ ನಿರ್ದೇಶಕರು (ನಿ) ಲೆಕ್ಕಪರಿಶೋಧನಾ ಇಲಾಖೆ ಇವರು ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ, ನೂತನ ಸಹಕಾರಿಗಳಿಗೆ ಆಡಳಿತ ಮಂಡಳಿ ಸಭೆ, ಸಾಮಾನ್ಯ ಸಭೆ ನಡೆಸುವುದು, ಠರಾವು ಬರೆಯುವ ಕುರಿತು ಮಾಹಿತಿ ನೀಡಿದರು ಮತ್ತು ಎರಡನೇ ಅವಧಿಯಲ್ಲಿ ಶ್ರೀ ಸಂತೋಷ್ ಕುಮಾರ್ ಎಂ ಜೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ವರ್ಷಾರ್ಂತ್ಯದ ಮಾಹಿತಿ, ಸೆಕ್ಷನ್ 34 ಮಾಹಿತಿ, ಲೆಕ್ಕಪರಿಶೋಧಕರ ನೇಮಕಾತಿ ಹಾಗೂ ಸಂಯುಕ್ತ ಸಹಕಾರಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಸ್ವಾಗತವನ್ನು ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ನಾಗರಾಜ ಕೋರಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಇವರು ನೇರವೇರಿಸಿದರು ಹಾಗೂ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಮುಖ್ಯಕಾರ್ಯನಿರ್ವಾಹಕರು ವಂದಿಸಿದರು. ತರಬೇತಿಯಲ್ಲಿ ಒಟ್ಟು 134 ಸಹಕಾರಿಗಳಿಂದ 142 ಜನ ಭಾಗವಹಿಸಿದ್ದರು.




**ಉತ್ತರ ಕನ್ನಡ :** ದಿನಾಂಕ 20–05–2026 ರಂದು ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ತಾಲ್ಲೂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಬೆಳಗ್ಗೆ 10.30 ಗಂಟೆಗೆ ವಿಷಯಾಧಾರಿತ ತರಬೇತಿಯನ್ನು ವಿನಾಯಕ ಸಭಾ ಭವನ, ಶಿರಸಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ಜೆ ನಾಯಕ ರವರು ದೀಪ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಜಿ.ಕೆ ರಾಮಪ್ಪ ಉಪ ನಿರ್ದೇಶಕರು(ನಿ) ಲೆಕ್ಕಪರಿಶೋಧನಾ ಇಲಾಖೆ ಇವರು ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ, ನೂತನ ಸಹಕಾರಿಗಳಿಗೆ ಆಡಳಿತ ಮಂಡಳಿ ಸಭೆ, ಸಾಮಾನ್ಯ ಸಭೆ ನಡೆಸುವುದು, ಠರಾವು ಬರೆಯುವ ಕುರಿತು ಮಾಹಿತಿ ನೀಡಿದರು ಮತ್ತು ಎರಡನೇ ಅವಧಿಯಲ್ಲಿ ಶ್ರೀ ಸಂತೋಷ್ ಕುಮಾರ್ ಎಂ ಜೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ವರ್ಷಾಂತ್ಯದ ಮಾಹಿತಿ, ಸೆಕ್ಷನ್ 34 ಮಾಹಿತಿ, ಲೆಕ್ಕಪರಿಶೋಧಕರ ನೇಮಕಾತಿ ಹಾಗೂ ಸಂಯುಕ್ತ ಸಹಕಾರಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ದಾಖಲಾತಿಗಳ ಕುರಿತು ಮಾಹಿತಿ ನೀಡಿದರು. ಸಭೆಯ ಸ್ವಾಗತವನ್ನು ಶ್ರೀ ವಿನಾಯಕ ಸೌಹಾರ್ದ ಸಹಕಾರಿ ನಿ, ಸಿದ್ದಾಪುರ, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶ್ರೀಧರ ಹೆಗಡೆ ಇವರು ಕೋರಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಹಾಗೂ ವಂದನಾರ್ಪಣೆಯನ್ನು ಗಣಪತಿ ನಾಯ್ಕ್, ಮುಖ್ಯಕಾರ್ಯನಿರ್ವಾಹಕರು ಸ್ಕೋಡ್ ವೇಸ್ ಮಹಿಳಾ ಸೌಹಾರ್ದ ಸಹಕಾರಿ ನೇರವೇರಿಸಿದರು. ತರಬೇತಿಯಲ್ಲಿ ಒಟ್ಟು 47 ಸಹಕಾರಿಗಳಿಂದ 53 ಜನ ಭಾಗವಹಿಸಿ ತರಬೇತಿ ಪ್ರಯೋಜನವನ್ನು ಪಡೆದರು.



**ಗದಗ :** ದಿನಾಂಕ 18–05–2026 ರಂದು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಬೆಳಿಗ್ಗೆ 10.30 ಗಂಟೆಗೆ ಐ.ಎಮ್.ಎ ಹಾಲ್ ಗದಗನಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆ ಇವರು ನೆರವೇರಿಸಿದರು.

ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಐ.ಸಿ. ಕರ್ಜಗಿ ಕೆ.ವಿ.ಜಿ ಬ್ಯಾಂಕ್ ಮ್ಯಾನೇಜರ್ (ನಿ) ಬಳ್ಳಾರಿ ಇವರು ಲೆಕ್ಕ ಪತ್ರಗಳ ಅಂತಿಮಗೊಳಿಸುವಿಕೆ ಕುರಿತು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ಸಂತೋಷ್ ಬಸಣ್ಣನವರ ಇವರು ದಾವ ದಾಖಲಾತಿ ಮತ್ತು ಸಹಕಾರಿಗಳ ವರ್ಷಾಂತ್ಯದ ಮಾಹಿತಿ ಸಲ್ಲಿಕೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಗಂಗಮ್ಮ ನಾಯ್ಕರ ನೇರವೇರಿಸಿದರು. ತರಬೇತಿಯಲ್ಲಿ ಒಟ್ಟು 37 ಸಹಕಾರಿಗಳಿಂದ 54 ಜನ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದರು.



**ದಕ್ಷಿಣ ಕನ್ನಡ :** ದಿನಾಂಕ 13.05.2026 ರಂದು ಬೆಳಿಗ್ಗೆ 10.00 ಘಂಟೆಗೆ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಕರಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಶ್ರೀನಿವಾಸ, ಹಂಪನಕಟ್ಟೆ ಮಂಗಳೂರು ಇಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಭಾಸ್ಕರ್ ದೇವಸ್ಯ ಇವರು ಭಾಗವಹಿಸಿದ್ದರು. ಸದರಿ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಭಾರತಿ ಜಿ ಭಟ್ ರವರು ವಹಿಸಿದ್ದರು. ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಪ್ರಾಸ್ತವಿಕ ನುಡಿಯನ್ನು ನುಡಿದರು. ಮುಂದುವರೆದು ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶ್ರೀಧರ್ ಸೋಮಯಾಜಿ ರವರು "ಲೆಕ್ಕಪರಿಶೋಧನ ವರದಿಯ ಪೂರ್ವ ಸಿದ್ದತೆ" ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ದ್ವಿತೀಯ ಅವಧಿಯಲ್ಲಿ ಸಂಪನ್ಮೂಲ

ವ್ಯಕ್ತಿಗಳಾಗಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಸಂಯುಕ್ತ ಸಹಕಾರಿಯ ಪರಿಷ್ಕೃತ ಸುತ್ತೋಲೆಗಳ ಕುರಿತು ವಿಶ್ಲೇಷಣೆ ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ನಂತರ ತೃತೀಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜಿತಿನ್ ಜಿಜೋ ರವರು ಸಾಲ ವಸೂಲಾತಿ ಮತ್ತು ದಾವ ದಾಖಲಾತಿ ಈ ವಿಷಯದ ಕುರಿತು ಉಪನ್ಯಾಸ ನೀಡಿದರು. ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವಿಜಯ್ ಬಿ. ಎಸ್. ಇವರು ತರಬೇತಿ ಕಾರ್ಯಕ್ರಮದ ಸ್ವಾಗತವನ್ನು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ನಂದನ್ ಬಿ.ಎನ್. ರವರು ನೆರವೇರಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 92 ಸೌಹಾರ್ದ ಸಹಕಾರ ಸಂಘಗಳಿಂದ 108 ಮಂದಿ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.



**ಮೈಸೂರು** : ಮೈಸೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 19.05.2026ರ ಮಂಗಳವಾರರಂದು ಬೆಳಿಗ್ಗೆ 10.30 ಕ್ಕೆ ದಿ ಇನ್ ಸ್ಟಿಟ್ಯೂಷನ್ ಆಫ್ ಇಂಜಿನಿರ್ಸ್, ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು ಇಲ್ಲಿ ಆಯೋಜಿಸಿಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಶಿಕ್ಷಣ ಸಲಹಾ ಸಮಿತಿ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ಮಹದೇವಸ್ವಾಮಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು, ಶ್ರೀ ಗುರುನರಸಿಂಹ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸೋಮಯಾಜಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ್ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ. ಭಗೀರಥ ರವರು ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಲೆಕ್ಕಪರಿಶೋಧನ ವರದಿ ಪೂರ್ವ ಸಿದ್ಧತೆ" ಈ ವಿಷಯದ ಕುರಿತು ಉಪನ್ಯಾಸವನ್ನು ಶ್ರೀ ಸೋಮಯಾಜಿ ಇವರು ಉಪನ್ಯಾಸ ನೀಡಿದರು.

ದ್ವಿತೀಯ ಅವಧಿಯಲ್ಲಿ ಸಹಕಾರಿಯಲ್ಲಿ "ಸಂಯುಕ್ತ ಸಹಕಾರಿಯ ಪರಿಷ್ಕೃತ ಸುತ್ತೋಲೆಗಳು" ಎಂಬ ವಿಷಯದ ಕುರಿತು ಉಪನ್ಯಾಸವನ್ನು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನ ಅವಧಿಯಲ್ಲಿ ಸಹಕಾರಿಯಲ್ಲಿ "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ" ವಿಷಯದ ಕುರಿತು ವಕೀಲರಾದ ಶ್ರೀ ಜಿತಿನ್ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 47 ಸೌಹಾರ್ದ ಸಹಕಾರಿಗಳಿಂದ 51 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾಸನ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ "ವಿಷಯಾಧಾರಿತ ತರಬೇತಿ ಕಾರ್ಯಕ್ರಮ" ವನ್ನು ದಿನಾಂಕ 26.05.2026 ಬೆಳಿಗ್ಗೆ 10 ಗಂಟೆಗೆ ಹೋಟೆಲ್ ಜ್ಯುವೆಲ್‌ರಾಕ್, ಬಿ.ಎಂ ರಸ್ತೆ, ಹಾಸನ ಇಲ್ಲಿ ಆಯೋಜಿಸಿಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಬಸವರಾಜು ಎಚ್.ಸಿ., ಮಾನ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಹಾಸನ ಜಿಲ್ಲೆ ಇವರು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ನೆರವೇರಿಸಿದರು. ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಲೆಕ್ಕ ಪರಿಶೋಧನಾ ವರದಿ ಪೂರ್ವ ಸಿದ್ಧತೆ" ಈ ವಿಷಯದ ಕುರಿತು ಶ್ರೀ ಬಸವರಾಜು ಎಚ್.ಸಿ ಮಾನ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು ಹಾಸನ, ಇವರು ಮಾಹಿತಿಯನ್ನು ನೀಡಿದರು. ದ್ವಿತೀಯ ಅವಧಿಯಲ್ಲಿ "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ" ಈ ವಿಷಯದ ಕುರಿತು ಉಪನ್ಯಾಸವನ್ನು ಶ್ರೀ ಜಿತಿನ್ ಮಾನ್ಯ ವಕೀಲರು, ಬೆಂಗಳೂರು ಇವರು ಮಾಹಿತಿಯನ್ನು ನೀಡಿದರು. ತೃತೀಯ ಅವಧಿಯಲ್ಲಿ "ಸಂಯುಕ್ತ ಸಹಕಾರಿಯ ಪರಿಷ್ಕೃತ ಸುತ್ತೋಲೆಗಳ ಕುರಿತು ವಿಶ್ಲೇಷಣೆ" ಈ ವಿಷಯದ ಕುರಿತು ಮಾಹಿತಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ್ ಜಿ ರವರು ನೆರವೇರಿಸಿದರು. ನಂತರ ಕಾರ್ಯಕ್ರಮದಲ್ಲಿ ಒಟ್ಟು ಹಾಸನ ಜಿಲ್ಲೆಯ 40 ಸೌಹಾರ್ದ ಸಹಕಾರಿಗಳಿಂದ 44 ಪ್ರತಿನಿಧಿಗಳು, ಸಂಯುಕ್ತ ಸಹಕಾರಿ ಸಿಬ್ಬಂದಿಗಳು ಹಾಗೂ ಇತರರು ಸೇರಿ ಒಟ್ಟು 52 ಜನ ಭಾಗವಹಿಸಿದ್ದರು.



**ಬಾಗಲಕೋಟ :** ದಿನಾಂಕ 26-05-2026 ರಂದು ಬೆಳಗ್ಗೆ 10.30 ಗಂಟೆಗೆ ಬಾಗಲಕೋಟ ಜಿಲ್ಲೆಯ ಬಾಗಲಕೋಟ, ಬೀಳಗಿ, ಹುನಗುಂದ, ಇಳಕಲ್, ಬಾದಾಮಿ ಮತ್ತು ಗುಳೇದಗುಡ್ಡ ತಾಲ್ಲೂಕುಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಶ್ರೀ ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ರವರು ವಹಿಸಿ ಕಾರ್ಯಕ್ರಮ ಉದ್ಘಾಟಿಸಿದರು.

ಮೊದಲನೆಯ ಅವಧಿಯಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕುರಿತು ಶ್ರೀ ಹಣಮಂತ ದೊಡ್ಡಸಿಣ್ಣವರ ಅಧೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಜಮಖಂಡಿ ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಜಮಖಂಡಿ ಇವರು ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಶೇಗುಣಸಿ ಇವರು ಕೋರಿದರು ಹಾಗೂ ಕಾರ್ಯಕ್ರಮವನ್ನು ಶ್ರೀಮತಿ ರೇಷ್ಮಾ ಪಾಟೀಲ ನಿರೂಪಿಸಿ, ವಂದಿಸಿದರು. ತರಬೇತಿಯಲ್ಲಿ ಒಟ್ಟು 88 ಸಹಕಾರಿಗಳಿಂದ 112 ಜನ ಭಾಗವಹಿಸಿ ತರಬೇತಿ ಪ್ರಯೋಜನವನ್ನು ಪಡೆದರು.



**ಬೆಳಗಾವಿ :** ದಿನಾಂಕ 26-05-2026 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಬೆಳಗಾವಿಯ ಆಟೋನಗರದ ಹರ್ಷಾ ಕ್ಲೋವರ್ ಕನ್ವೆನ್ಷನ ಹಾಲ್‌ನಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸೌಹಾರ್ದ ದಾವಾ ಪಂಚಾಯತ್ ನ್ಯಾಯಾಲಯದ ಮಾನ್ಯ ಪೀಠಾಧಿಕಾರಿಗಳಾದ ಶ್ರೀ ವಿಜಯಕುಮಾರ್ ಜಿ.ಆರ್. ಅವರು ಉದ್ಘಾಟಿಸಿ, ಸಹಕಾರಿ ಸಂಸ್ಥೆಗಳ ಸುಗಮ ನಿರ್ವಹಣೆಗೆ ಇಂತಹ ತರಬೇತಿಗಳು ಅತ್ಯಗತ್ಯ ಎಂದು ಆಶಯ ವ್ಯಕ್ತಪಡಿಸಿದರು.

ಮೊದಲನೇ ಅವಧಿಯಲ್ಲಿ ಬೆಳಗಾವಿಯ ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಮಹಾಂತೇಶ ಹೊಸಪೇಟ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ಸಹಕಾರಿ ಸಂಸ್ಥೆಗಳಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಬೆಳಗಾವಿ ಮತ್ತು ಕಲಬುರಗಿ ಪ್ರಾಂತದ ಟಾಸ್ಕ್ ಫೋರ್ಸ್ ವಿಭಾಗದ ಮುಖ್ಯಸ್ಥರಾದ ಶ್ರೀ ಗಂಗಾರಾಮ ಸಗ್ಗು ಕೊಳಾಪ್ಪೆ ಅವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೆಗಳ ಕುರಿತು ಸಹಕಾರಿಗಳ ಮುಖ್ಯ ಕಾರ್ಯನಿರ್ವಹಕರಿಗೆ ಉಪಯುಕ್ತ ಮಾಹಿತಿ ಹಾಗೂ ಮಾರ್ಗದರ್ಶನ ನೀಡಿದರು. ಬೆಳಗಾವಿ ಪ್ರಾಂತದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ, ತರಬೇತಿಯ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೃಷಭನಾಥ ಪರಪ್ಪನವರ ಅವರು ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ನೆರವೇರಿಸಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಹುಕ್ಕೇರಿ ತಾಲೂಕಿನ ಒಟ್ಟು 144 ಸೌಹಾರ್ದ ಸಹಕಾರಿ ಸಂಸ್ಥೆಗಳಿಂದ 176 ಜನ ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ 29.05.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿಯ ವತಿಯಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ, ಯಲಬುರ್ಗಾ ಹಾಗೂ ಕುಕನೂರ ತಾಲೂಕುಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ವೀರಮಹೇಶ್ವರ ಸಮುದಾಯ ಭವನ ಕೊಪ್ಪಳ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೇರಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಮಹಾಲಿಂಗಪ್ಪಾ ಧೊಟಿಹಾಳ, ನಿರ್ದೇಶಕರಾದ ಶ್ರೀ ಶಂಕರಗೌಡ ಹಿರೇಗೌಡ, ಶ್ರೀ ನಾಗಲಿಂಗಪ್ಪ ಪತ್ತಾರ, ಶ್ರೀ ಗವಿಸಿದಯ್ಯ ಲಿಂಗಬಸಯ್ಯನಮಠ, ಬಸವರಾಜ ಪಡಿ, ಮುದ್ದಪ್ಪನೀಲನಗೌಡರ್, ಶರಣಪ್ಪ ವಡಗೇರಿ ಹಾಗೂ ಪ್ರಾಂತೀಯ ಅಧಿಕಾರಿಯವರಾದ ಶ್ರೀ ಸಂಜಯ ಕೋರಟಕರ ರವರು ಉಪಸ್ಥಿತರಿದ್ದರು.

ವಿಷಯ 1: ಆಡಳಿತ ಮಂಡಳಿಯ ಸಭೆಯ ನಡುವಳಿ ಹಾಗೂ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ದೇಶಕರ ಪಾತ್ರದ ಕುರಿತು ಶ್ರೀ ರಘುನಂದನ್ ಕೆ ರವರು ಉಪನ್ಯಾಸ ನೀಡಿದರು. ವಿಷಯ 2: ಲೆಕ್ಕಪ–ರಿಶೋಧನಾ ವರದಿಯ ಪೂರ್ವ ಸಿದ್ದತೆಯ ಕುರಿತು ಶ್ರೀ ಸುನೀಲ ಪತ್ತಾರ ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ರವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಪ್ರಾಸ್ತಾವಿಕವಾಗಿ ಮಾನ್ಯ ಪ್ರಾಂತೀಯ ಅಧಿಕಾ–ರಿಯವರಾದ ಶ್ರೀ ಸಂಜಯ ಕೋರಟಕರರವರು ನಡೆಸಿಕೊಟ್ಟರು. ತರಬೇತಿ ಕಾರ್ಯಕ್ರಮದಲ್ಲಿ 235 ಪ್ರತಿನಿಧಿಗಳು ಭಾಗವಹಿಸಿದರು.



**ಬೆಳಗಾವಿ :** ದಿನಾಂಕ 26–05–2026 ರಂದು ಬೆಳಗ್ಗೆ 10.30 ಗಂಟೆಗೆ ಬೆಳಗಾವಿ ಜಿಲ್ಲೆಯ ಬೆಳಗಾವಿ ಹಾಗೂ ಖಾನಾಪುರ ತಾಲ್ಲುಕೂಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಮಹಾಂತ ಭವನ, ಮಹಾಂತೇಶ ನಗರ ಬೆಳಗಾವಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿಯನ್ನು ಶ್ರೀ ಸುರೇಶಬಾಬು ಸಣ್ಣಕ್ಕಿ ಸಿಂಡಿಕೇಟ್ ಬ್ಯಾಂಕ್ ವ್ಯವಸ್ಥಾಪಕರು(ನಿವೃತ್ತ) ಹಾಗೂ ಶ್ರೀ ಎಸ್ ಡಿ ಕರ್ಕಿ, ಬಿಡಿಸಿಸಿ ಬ್ಯಾಂಕ ವ್ಯವಸ್ಥಾಪಕರು(ನಿವೃತ್ತ)ರವರುಗಳು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಶ್ರೀ ಬಸವರಾಜ ಹೊಂಗಲ ಪ್ರಾಂತೀಯ ಅಧಿಕಾರಿ ಬೆಳಗಾವಿರವರು ಪ್ರಾಸ್ತಾವಿಕ ನುಡಿಗಳನ್ನಾಡಿ, ತರಬೇತಿಯ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು

ತರಬೇತಿಯ ಮೊದಲನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಗಂಗಾರಾಮ ಕೋಳಾಪ್ಪೆ, ಟಾಸ್ಕ್ ಫೋರ್ಸ್ ಅಧಿಕಾರಿಗಳು ಬೆಳಗಾವಿ ಇವರು ದಾವ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೆಗಳ ಕುರಿತು ಮಾಹಿತಿ ನೀಡಿದರು ಮತ್ತು ಎರಡನೇಯ ಅವಧಿಯಲ್ಲಿ ಶ್ರೀ ಮಹಾಂತೇಶ ಹೊಸಪೇಠ, ಸನ್ನದು ಲೆಕ್ಕಪರಿಶೋಧಕರು, ಇವರು ಲೆಕ್ಕಪತ್ರ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಸಭೆಯ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ, ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠ ಇವರು ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 111 ಸಹಕಾರಿಗಳಿಂದ 152 ಜನ ಭಾಗವಹಿಸಿ ತರಬೇತಿ ಪ್ರಯೋಜನವನ್ನು ಪಡೆದರು.

---



**ಬಾಗಲಕೋಟ :** ದಿನಾಂಕ 27–05–2026 ರಂದು ಬೆಳಗ್ಗೆ 10.30 ಗಂಟೆಗೆ ಬಾಗಲಕೋಟ ಜಿಲ್ಲೆಯ ಮುಧೋಳ, ಜಮಖಂಡಿ, ರಬಕವಿ–ಬನಹಟ್ಟಿ ಹಾಗೂ ತೇರದಾಳ ತಾಲ್ಲೂಕಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಸ್ಕೈ ಡೈನ್ ಇನ್ ರೆಸ್ಟೋರೆಂಟ್, ಮುಧೋಳ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲರವರು ನೆರವೇರಿಸಿದರು

ತರಬೇತಿಯ ಮೊದಲನೆಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಹಣಮಂತ ದೊಡ್ಡಸಿನನ್ನವರ ಅಧೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ಜಮಖಂಡಿ ಇವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ವಿಷಯದ ಕುರಿತು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಶ್ರೀ ಸುನೀಲ್ ಪತ್ತಾರ, ಸಹಾಯಕ ನಿರ್ದೇಶಕರು, ಲೆಕ್ಕಪ–ರಿಶೋಧನಾ ಇಲಾಖೆ, ಜಮಖಂಡಿ ಇವರು ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಸಭೆಯ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಶೇಗುಣಸಿ ಇವರು ಕೋರಿದರು ಹಾಗೂ ಕಾರ್ಯಕ್ರಮವನ್ನು ಶ್ರೀಮತಿ ರೇಷ್ಮಾ ಪಾಟೀಲ ನಿರೂಪಿಸಿ, ವಂದಿಸಿದರು. ಸಭೆಯಲ್ಲಿ ಒಟ್ಟು 149 ಸಹಕಾರಿಗಳಿಂದ 196 ಜನ ಭಾಗವಹಿಸಿ ತರಬೇತಿ ಪ್ರಯೋಜನವನ್ನು ಪಡೆದರು.

---



**ಬೆಳಗಾವಿ :** ದಿನಾಂಕ 27–05–2026 ರಂದು ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಚನ್ನಮ್ಮನ ಕಿತ್ತೂರ, ಸವದತ್ತಿ, ಯರಗಟ್ಟಿ, ರಾಮದುರ್ಗ ಮತ್ತು ಗೋಕಾಕ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಬೆಳಗಾವಿಯ ಆಟೋನಗರದ ಹರ್ಷಾ ಕ್ಲೋವರ್ ಕನ್ವೆನ್ಷನ್ ಹಾಲ್‌ನಲ್ಲಿ ಆಯೋಜಿಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಮಹಾಂತೇಶ ಹೊಸಪೇಠ ನೇರವೇರಿಸಿದರು.

ತರಬೇತಿಯ ಮೊದಲನೇಯ ಅವಧಿಯಲ್ಲಿ ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಮಹಾಂತೇಶ ಹೊಸಪೇಟ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಸಹಕಾರಿ ಸಂಸ್ಥೆಗಳಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ಕುರಿತು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ಶ್ರೀ ರಾಚಯ್ಯ ಹಿರೇಮಠ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಅವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರಿಯೆಗಳ ಕುರಿತು ಉಪಯುಕ್ತ ಮಾಹಿತಿ ಹಾಗೂ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದ ಆರಂಭದಲ್ಲಿ ಬೆಳಗಾವಿ ಪ್ರಾಂತದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ, ತರಬೇತಿಯ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಅವರು ಕಾರ್ಯಕ್ರಮದ ಸ್ವಾಗತ, ಶ್ರೀ ವಿನೋದ ಮರಾಠಾ ಇವರು ನಿರೂಪಣೆ ಹಾಗೂ ಶ್ರೀ ವೃಷಭನಾಥ ಪರಪ್ಪನರವರು ವಂದನಾರ್ಪಣೆಯನ್ನು ನೆರವೇರಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 87 ಸೌಹಾರ್ದ ಸಹಕಾರಿ ಸಂಸ್ಥೆಗಳಿಂದ 121 ಜನ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಿ ತರಬೇತಿಯ ಸದುಪಯೋಗವನ್ನು ಪಡೆದುಕೊಂಡರು.



**ಬೆಂಗಳೂರು** : ದಿನಾಂಕ 29.05.2026ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು, ಪ್ರಾಂತೀಯ ಅಧಿಕಾರಿಗಳಾದ ಶ್ರೀಧರ್ ರವರು ಭಾಗವಹಿಸಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳು ನಡೆಸಿಕೊಟ್ಟರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಜೇಶ್ ಕೆ.ಎಂ ರವರು ವೇದಿಕೆಯ ಮೇಲಿನ ಗಣ್ಯರನ್ನು ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್ ಹಾಗೂ ಕಿರಿಯ ಅಧಿಕಾರಿಯಾದ ಶ್ರೀ ಭವನ್‌ರಾವ್ ರವರು ನಡೆಸಿಕೊಟ್ಟರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಭಾಗವಹಿಸಿದ್ದರು. ತರಬೇತಿ ಕಾರ್ಯಾಗಾರದಲ್ಲಿ ಮಾನ್ಯ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಗುರುಸ್ವಾಮಿರವರು ಸಹಕಾರ ಸಂಘಗಳಲ್ಲಿ ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಮಾಹಿತಿ ನೀಡಿದರು. ಶ್ರೀ ವೈ.ವಿ. ಗುಂಡೂರಾವ್, ಮಾನ್ಯ ಸಹಾಯಕ ಪ್ರಧಾನ ವ್ಯವಸ್ಥಾಪಕರು (ನಿ.), ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಬೆಂಗಳೂರು ಇವರು ಕೌಶಲ್ಯ ಅಭಿವೃದ್ಧಿ ಮತ್ತು ಪ್ರೇರಣೆ ವಿಷಯದ ಕುರಿತು ಉಪನ್ಯಾಸ ನೀಡಿದರು. ತರಬೇತಿ ಕಾರ್ಯಕ್ರಮದ ನಂತರ ಸಹಕಾರಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀ ನಗರೇಶ್ವರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಂ. ಬಸಪ್ಪ ರವರು, ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ವಿ.ಬಿ. ಪಾಟೀಲ್ ರವರು ಭಾಗವಹಿಸಿ ಸಹಕಾರಿಗಳು ಲಾಭಗಳಿಸುವ ಬಗ್ಗೆ ಸಲಹೆ ನೀಡಿದರು. 40 ಸಹಕಾರಿಗಳಿಂದ 52 ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ** : ದಿನಾಂಕ 27.05.2026ರಂದು ಶತಧಾರ ಸೌಹಾರ್ದ ಕೋ–ಆಪರೇಟಿವ್ ಲಿ, ಚನ್ನಗಿರಿ, ದಾವಣಗೆರೆ ಸಹಕಾರಿಯ ನೂತನ ಶಾಖೆಯನ್ನು ದಾವಣಗೆರೆ ತಾಲೂಕಿನ ಬಾಡಾ ಗ್ರಾಮದಲ್ಲಿ ಉದ್ಘಾಟಿಸಲಾಯಿತು. ಶಾಖೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶತಧಾರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಅಶೋಕ ಡಿ.ಪಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತುಮಕೋಸ್ ಚನ್ನಗಿರಿ ಇದರ ಅಧ್ಯಕ್ಷರಾದ ಶ್ರೀ ಹೆಚ್. ಎಸ್. ಶಿವಕುಮಾರ್ ರವರು, ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು, ದಾವಣಗೆರೆ ಡಿಸಿಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಶೇಖರಪ್ಪ ರವರು ಭಾಗವಹಿಸಿದ್ದರು. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಇವರು ಉಪಸ್ಥಿತರಿದ್ದರು.

## ಮೇ 2026 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

### 1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ ಮೇ ಮಾಹೆಯಲ್ಲಿ 1) ಕಸ್ತೂರಿ ರಂಗಪ್ಪನಾಯಕ ತೋಟಗಾರಿಕಾ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರಾಟ ಸೌಹಾರ್ದ ಸಹಕಾರಿ ನಿ., ಶಿರಾ. ತುಮಕೂರು ಜಿಲ್ಲೆ. 2) ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಡಕಿಹಾಳ, ನಿಪ್ಪಾಣಿ 3) ಲಿಂಗಾಯತ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೀದರ. 4) ಅಹಲ್ಯಾಬಾಯಿ ಹೋಳ್ಕರ್ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಮನಾಬಾದ. ಬೀದರ. 5) ಚಾಲುಕ್ಯಸಿರಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾದಾಮಿ, ಬಾಗಲಕೋಟ. 6) ದಿ ನಿಪ್ಪಾಣಿ ಮೋಟಾರ್ ಟ್ರಾನ್ಸ್‌ಪೋರ್ಟ್ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ, ಬೆಳಗಾವಿ. 7) ನವಶಕ್ತಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಪ್ರಕಾಶ ನಗರ, ಬೆಂಗಳೂರು. 8) ಆದಿಜಾಂಬವ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬಳ್ಳಾರಿ. 9) ಗ್ರಾಮಚೇತನ ಸಾವಯವ ಕೃಷಿ ಮತ್ತು ಜಾನುವಾರು ಉತ್ಪಾದಕರ ಸೌಹಾರ್ದ ಸಹಕಾರಿ ನಿ., ಬಾಗಲಕೋಟ. 10) ವಿಶ್ವಜ್ಯೋತಿ ಸೌಹಾರ್ದ ಪತ್ತಿನ ಸಹಕಾರಿ ನಿ. ಬೇಲೂರು, ಬಾದಾಮಿ. ಒಟ್ಟು 10 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಕಲಂ 38ಎ ರನ್ವಯ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

## ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀ ವಿಜಯ ಕುಮಾರ್ ಜಿ. ಆರ್. ಇವರಿಗೆ ಮುಂಬಡ್ತಿ



**ಬೆಂಗಳೂರು :** ದಿನಾಂಕ 01.06.2026 ರಂದು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಗಳಾದ ಶ್ರೀ ವಿಜಯ ಕುಮಾರ್ ಜಿ. ಆರ್ ಇವರಿಗೆ ಸಹಕಾರ ಸಂಘಗಳ ಉಪನಿಬಂಧಕರ ಹುದ್ದೆಯಿಂದ ಸಹಕಾರ ಸಂಘಗಳ ಜಂಟಿ ನಿಬಂಧಕರ ಹುದ್ದೆಗೆ ಮುಂಬಡ್ತಿ ಪಡೆದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಹೂಗುಚ್ಛ ನೀಡಿ ಶುಭಾಶಯ ಕೋರಿದರು.. ಈ ಸಂದರ್ಭದಲ್ಲಿ ಮಾನ್ಯ ಸಹಾಯಕ ನಿಬಂಧಕರು, ಅಮಲ್ಜಾರಿ ವಿಭಾಗ, ನ್ಯಾಯಾಲಯ ವಿಭಾಗದ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

---



**ಬೆಂಗಳೂರು :** ದಿನಾಂಕ 26.05.2026 ರಂದು ಬೆಂಗಳೂರು ಪ್ರಾಂತದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸನ್ 2024–25 ಹಾಗೂ 2025–26ನೇ ಸಾಲಿನಲ್ಲಿ ಹೊಸದಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿ ಮಾತನಾಡಿ ಯಶಸ್ವಿ ಸಹಕಾರಿಗಳಾಗಲು ಸಹಕಾರ ಸಂಸ್ಥೆಗಳಲ್ಲಿನ ನಮ್ಮ ಪಾತ್ರ ಕುರಿತಾಗಿ ಸಹಕಾರಿ ಕ್ಷೇತ್ರವನ್ನು ಪ್ರವೃತ್ತಿಯಾಗಿ ಆಯ್ಕೆ ಮಾಡಿಕೊಂಡು ನಾವುಗಳು ಕಾರ್ಯನಿರ್ವಹಿಸಬೇಕು. ನಾನು ವೃತ್ತಿಯಲ್ಲಿ ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರವನ್ನು ಆಯ್ದುಕೊಂಡಿದ್ದು ಪ್ರವೃತ್ತಿಗಾಗಿ ದಿ ಪಾವಗಡ ಮಲ್ಟಿ ಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ನ ಅಧ್ಯಕ್ಷನಾಗಿ ಕಾರ್ಯನಿರ್ಹಿಸುತ್ತಿದ್ದೇನೆ. ಜೀವನಕ್ಕೆ ವೃತ್ತಿ ಅವಶ್ಯವಾಗಿದ್ದು ನಮ್ಮ ಗೌರವಕ್ಕೆ ಪ್ರವೃತ್ತಿಯಾಗಿರುವ ಸಹಕಾರ ಕ್ಷೇತ್ರ ಬಹಳ ಕೊಡುಗೆಯನ್ನು ನೀಡಿದ್ದು ಸ್ವ–ಗೌರವನ್ನು ಹೆಚ್ಚಿಸುತ್ತದೆ. ಸಹಕಾರ ಕ್ಷೇತ್ರ ಸೇವಾ ಆಧಾರಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.

ನೂತನವಾಗಿ ಸಹಕಾರಿಯನ್ನು ಪ್ರಾರಂಭಮಾಡುವ ನಾವು ಸಾರ್ವಜನಿಕರನ್ನು ಆಕರ್ಷಣೆಗಾಗಿ ಶೇರು ಸಂಗ್ರಹಿಸಿದ ಹಣವನ್ನು ವ್ಯಹಿಸಿ ಪೀಠೋಪಕರಣಗಳನ್ನು ಮತ್ತು ಕಛೇರಿಗಳನ್ನು ಆಕರ್ಷಣೆಯವಾಗಿ ಸಿದ್ದಮಾಡಲು ಹೋಗುತ್ತೇವೆ. ಇದರಿಂದ ನೂತನ ಸಹಕಾರಿಗಳ ಲಾಭಗಳಿಸುವ ಬದಲು ನಷ್ಟವೊಂದುತ್ತವೆ. ಇದರಿಂದ ಸಹಕಾರಿಗಳನ್ನು ಮುನ್ನಡೆಸುವುದು ಕಷ್ಟವಾಗಬಹುದು. ಸಹಕಾರಿಗಳಾದ ನಾವುಗಳು ಲಾಭಗಳಿಸದರೆ ಅವಶ್ಯಕತೆಗೆ ಅನುಗುಣವಾಗಿ ಕಛೇರಿಗಳನ್ನು ಸಿದ್ದಪಡಿಸಿಕೊಳ್ಳಬಹುದು ಮತ್ತು ಸ್ವಂತ ಕಟ್ಟಡವನ್ನು ಹೊಂದಬಹುದು. ಯಾವುದೇ ಕಾರಣಕ್ಕೂ ಸದಸ್ಯರ ಶೇರು ಹಣ ಹಾಗೂ ಠೇವಣಿಗಳನ್ನು ಆಸ್ತಿಗಳಲ್ಲಿ ವಿನೀಯೋಗಿಸಬಾರದು, ಅವಶ್ಯಕತೆಗಿಂತ ಹೆಚ್ಚಿನ ಸಿಬ್ಬಂದಿಗಳನ್ನು ಸೇರಿಸಿಕೊಳ್ಳಬಾರದು ಸಹಕಾರಿಗಳು ಸರಿಯಾದ ಗುರಿ ನಿರ್ದಾರವನ್ನು ಮಾಡಿಕೊಂಡು ಸಹಕಾರಿಯ ಬೆಳವಣಿಗೆಯಲ್ಲಿ ನಾವುಗಳು ಸಕ್ರೀಯವಾಗಿ ಪಾಲ್ಗೊಳ್ಳುವ ಮೂಲಕ ಲಾಭದಾಯಕ ಸಂಸ್ಥೆಗಳಾಗಿ ಮಾಡಬಹುದು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜೀ ಪಾಟೀಲ ರವರು ಭಾಗವಹಿಸಿದ್ದರು. ಪ್ರಸ್ತಾವಿಕ ನುಡಿಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನುಡಿದರು. ವೇದಿಕೆಯ ಮೇಲಿನ ಗಣ್ಯರನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಸ್ವಾಗತಿಸಿದರು. ಸಭಾ ಕಾರ್ಯಕ್ರಮದ ನಂತರ ಸಹಕಾರಿಗಳಿಗೆ ಆರ್ಥಿಕ ಶಿಸ್ತು ಮತ್ತು ನಿರ್ವಹಣೆ ವಿಷಯದ ಕುರಿತು ಶ್ರೀ ವರುಣ್ ಭಟ್, ಸನ್ನದು ಲೆಕ್ಕಪರಿಶೋಧಕರು ಇವರು ಮಾಹಿತಿ ನೀಡಿದರು. ಸಹಕಾರಿಯ ಶಾಸನಾತ್ಮಕ ಕಾರ್ಯಗಳು, ಮುಖ್ಯಕಾರ್ಯನಿರ್ವಾಹಕರು ಮತ್ತು ಆಡಳಿತ ಮಂಡಳಿ ಸದಸ್ಯರ ಕರ್ತವ್ಯ ಹಾಗೂ ಜವಾಬ್ದಾರಿಗಳ ಕುರಿತು ಶ್ರೀ ನಾಗರಾಜಯ್ಯ, ಮಾನ್ಯ ನಿವೃತ್ತ ಅಪರ ನಿಬಂಧಕರು, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರವಿಕುಮಾರ್ ಕೆ.ಆರ್. ಹಾಗೂ ಕಿರಿಯ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ನೆರವೇರಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಜೇಶ್ ಕೆ.ಎಂ ಹಾಗೂ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಭಾಗವಹಿಸಿದ್ದರು. 18 ಸೌಹಾರ್ದ ಸಹಕಾರಿಗಳಿಂದ 52 ಪ್ರತಿನಿಧಿಗಳು ಭಾಗವಹಿಸಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ



ಕರ್ನಾಟಕ ಸರ್ಕಾರದ ಸಾಂಖ್ಯಿಕ ಮತ್ತು ಯೋಜನಾ ಸಚಿವರು ಹಾಗೂ ಹೊಯ್ಸಳ ಸೌಹಾರ್ದ ಸಹಕಾರಿ ನಿ., ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ ಇದರ ಅಧ್ಯಕ್ಷರು, ಚಿತ್ರದುರ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರು ಆಗಿರುವ ಮಾನ್ಯ ಶ್ರೀ ಡಿ ಸುಧಾಕರ್ ರವರು ನಿಧನರಾಗಿರುತ್ತಾರೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿಯವರು, ಜಿಲ್ಲೆಯ ಸಹಕಾರಿಗಳು, ಹಿರಿಯ ಸಹಕಾರಿಗಳು ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿಯನ್ನು ಸಲ್ಲಿಸಿದರು

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



**ಚಾಮರಾಜನಗರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಾಮರಾಜನಗರ ಜಿಲ್ಲೆಯಲ್ಲಿನ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ "ಕ್ಲಸ್ಟರ್ ಮಟ್ಟದ ತರಬೇತಿ" ಕಾರ್ಯಕ್ರಮವನ್ನು ದಿನಾಂಕ: 12.05.2026 ರಂದು "ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಅಪರೇಟಿವ್ ಲಿ., 1ನೇ ಮಹಡಿ, ಚೌಡೇಶ್ವರಿ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ತರಕಾರಿ ಮಾರುಕಟ್ಟೆ ಹತ್ತಿರ, ಚಾಮರಾಜನಗರ ಈ ಕಛೇರಿಯ ಸಭಾಂಗಣದಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ & ಅಧ್ಯಕ್ಷತೆಯನ್ನು ಶ್ರೀ ವೀರಭದ್ರಸ್ವಾಮಿ, ಮುಖ್ಯ ಪ್ರವರ್ತಕರು, ಉದ್ದೇಶಿತ ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ವಹಿಸಿದ್ದರು. ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಉಪಸ್ಥಿತರಿದ್ದು ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ನುಡಿದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ, ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು. ಈ ಕಾರ್ಯಾಗಾರದ ಮೊದಲನೇ ಅವಧಿಯಲ್ಲಿ "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿಯ" ಕುರಿತು ಶ್ರೀ ಜಿತೀನ್, ವಕೀಲರು, ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರ, ಇವರು "ಸಂಯುಕ್ತ ಸಹಕಾರಿಯ ಪರಿಷ್ಕೃತ ಸುತ್ತೋಲೆಗಳ ಕುರಿತು ವಿಶ್ಲೇಷಣೆ" ಎಂಬ ವಿಷಯದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರುಗಳೊಂದಿಗೆ ಚರ್ಚಿಸಿದರು, ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 25 ಸೌಹಾರ್ದ ಸಹಕಾರಿಗಳಿಂದ 32 ಪ್ರತಿನಿಧಿಗಳು ಭಾಗವಹಿಸಿದ್ದರು.



**ಮಂಡ್ಯ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿನ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ "ಕ್ಲಸ್ಟರ್ ಮಟ್ಟದ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 08.05.2026ರಂದು "ಮಂಡ್ಯ ಜಿಲ್ಲೆ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಎಂ ಲಿಂಗಯ್ಯ ಬಿಲ್ಡಿಂಗ್, 1ನೇ ಮಹಡಿ, ಮಹಾಲಕ್ಷ್ಮೀ ಸ್ವೀಟ್ಸ್ ಎದುರು, ವಿ.ವಿ ರಸ್ತೆ, ಮಂಡ್ಯ. ಈ ಕಛೇರಿಯ ಸಭಾಂಗಣದಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ & ಅಧ್ಯಕ್ಷತೆಯನ್ನು ಶ್ರೀ ಗುರುರಾಜ್ ಬಿ.ಟಿ, ಮಾನ್ಯ ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ವಹಿಸಿದ್ದರು. ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಉಪಸ್ಥಿತರಿದ್ದು ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ನುಡಿದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ, ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು. ಈ ಕಾರ್ಯಾಗಾರದ ಮೊದಲನೇ ಅವಧಿಯಲ್ಲಿ "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿಯ" ಕುರಿತು ಶ್ರೀ ಜಿತೀನ್, ವಕೀಲರು, ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರ, ಇವರು "ಸಂಯುಕ್ತ ಸಹಕಾರಿಯ ಪರಿಷ್ಕೃತ ಸುತ್ತೋಲೆಗಳ ಕುರಿತು ವಿಶ್ಲೇಷಣೆ" ಎಂಬ ವಿಷಯದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರುಗಳೊಂದಿಗೆ ಚರ್ಚಿಸಿದರು, ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 31 ಸೌಹಾರ್ದ ಸಹಕಾರಿಗಳಿಂದ 46 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಾವಣಗೆರೆ** : ದಿನಾಂಕ 25.05.2026ರಂದು ಹರಿಹರ ತಾಲೂಕಿನ ಮಲೇಬೆನ್ನೂರು ಪಟ್ಟಣದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ನಂದಿ ಸೌಹಾರ್ದ ಸಹಕಾರಿ ನಿ, ಮಲೇಬೆನ್ನೂರು ಇಲ್ಲಿ ಆಯೋಜಿಸಲಾಗಿ-ತ್ತು.. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಷಾಂತ್ಯದ ಮಾಹಿತಿ ಸಲ್ಲಿಕೆ, ಶಾಸನಬದ್ಧ ಕರ್ತವ್ಯಗಳು ಹಾಗೂ 2025-26ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಕ್ರಮವಿಡುವ ಕುರಿತು ಮಾಹಿತಿ ನೀಡಿದರು. 3 ಸೌಹಾರ್ದ ಸಹಕಾರಿಗಳಿಂದ 4 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 04.05.2026ರಂದು ಹೊಸದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜನಾಭಿವೃದ್ಧಿ ಸೌಹಾರ್ದ ಸಹಕಾರಿ ಸಂಘ ನಿ, ಹೊಸದುರ್ಗ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಮುಖ್ಯ ಅತಿಥಿಗಳಾಗಿ ಜನಾಭಿವೃದ್ಧಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಬಿ. ನಟರಾಜಮೂರ್ತಿ ರವರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಷಾಂತ್ಯದ ಮಾಹಿತಿ ಸಲ್ಲಿಕೆ, ಶಾಸನಬದ್ಧ ಕರ್ತವ್ಯಗಳು ಹಾಗೂ 2025-26ನೇ ಸಾಲಿನ ಲೆಕ್ಕಪ-ರಿಶೋಧನಾ ವರದಿಗೆ ಕ್ರಮವಿಡುವ ಕುರಿತು ಮಾಹಿತಿ ನೀಡಿದರು. 5 ಸೌಹಾರ್ದ ಸಹಕಾರಿಗಳಿಂದ 6 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿತ್ರದುರ್ಗ** : ದಿನಾಂಕ 30.05.2026ರಂದು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮೊಳಕಾಲ್ಮೂರು ಸೌಹಾರ್ದ ಸಹಕಾರಿ ಸಂಘ ನಿ, ಮೊಳಕಾಲ್ಮೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನರಸಿಂಗರಾವ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ವಷಾಂತ್ಯದ ಮಾಹಿತಿ ಸಲ್ಲಿಕೆ, ಶಾಸನಬದ್ಧ ಕರ್ತವ್ಯಗಳು ಹಾಗೂ 2025-26ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಕ್ರಮವಿಡುವ ಕುರಿತು ಮಾಹಿತಿ ನೀಡಿದರು. 13 ಸೌಹಾರ್ದ ಸಹಕಾರಿಗಳಿಂದ 15 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 20.05.2026ರಂದು ಚಳ್ಳಕೆರೆ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ವಾಸವಿ ಸೌಹಾರ್ದ ಸಹಕಾರಿ ಸಂಘ ನಿ, ಚಳ್ಳಕೆರೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದಲ್ಲಿ ಸದರಿ ಸಹಕಾ-ರಿಯ ಅಧ್ಯಕ್ಷರಾದ ಶ್ರೀ ಚಿದಂಬರ್ ಶೆಟ್ಟಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ತರಬೇತಿಯಲ್ಲಿ ವಷಾಂತ್ಯದ ಮಾಹಿತಿ ಸಲ್ಲಿಕೆ, ಶಾಸನಬದ್ಧ ಕರ್ತವ್ಯಗಳು ಹಾಗೂ 2025-26ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಕ್ರಮವಿಡುವ ಕುರಿತು ಮಾಹಿತಿ ನೀಡಿದರು. 10 ಸೌಹಾರ್ದ ಸಹಕಾ-ರಿಗಳಿಂದ 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಅವರ 184ನೇ ದಿನಾಚರಣೆ



**ಕಲಬುರಗಿ** : ದಿನಾಂಕ 25.05.2026ರಂದು ದೇಶದ ಸಹಕಾರ ಪಿತಾಮಹ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ರವರ ಜನ್ಮ ದಿನದ ಪ್ರಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಕಲಬುರ್ಗಿ ಪ್ರಾಂತೀಯ ಕಚೇರಿಯಲ್ಲಿ ಸಹಕಾರ ಪಿತಾಮಹರಾದ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಅವರ 184ನೇ ಜನ್ಮ ದಿನದಂದು ಸಿದ್ದನಗೌಡ ಸಣ್ಣರಾಮನಗೌಡ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸ್ವಂತ ಕಛೇರಿಯಲ್ಲಿ ಸಸಿಯನ್ನು ನೆಡುವುದರ ಮೂಲಕ ಕಲಬುರಗಿ ಪ್ರಾಂತೀಯ ಅಧಿಕಾರಿಯಾದ ಶ್ರೀ ಸಂಜಯ ಕೋರಟಕರ ರವರು ಸಿದ್ದನಗೌಡ ಸಣ್ಣರಾಮನಗೌಡ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಸಸಿಗೆ ನೀರನ್ನು ಹಾಕಿ ಮಾತನಾಡುತ್ತಾ ಇಂದಿನ ಸಹಕಾರ ಚಳುವಳಿಗೆ ಭದ್ರ ಬುನಾದಿ ಹಾಕಿದವರು ನಮ್ಮ ರಾಜ್ಯದ ಅಂದಿನ ಧಾರವಾಡ ಜಿಲ್ಲೆ ಹಾಗೂ ಇಂದಿನ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ 1905ರಲ್ಲಿ ಸಹಕಾರ ಚಳುವಳಿ ಪ್ರಾರಂಭಿಸುವುದರ ಮುಖಾಂತರ ನಮ್ಮ ಸಹಕಾರ ಕ್ಷೇತ್ರದ ಪಿತಾಮರಾಗಿ ಅಜಾಮರಾಗಿ ಇಂದು ಅವರ ಹಾಕಿಕೊಟ್ಟಿರುವಂತಹ ಸಹಕಾರ ತತ್ವಗಳು ಆದರ್ಶಗಳು ದೇಶದ ಹಲವು ಸೌಹಾರ್ದ ಸಹಕಾರಿಗಳು ಹಾಗೂ ಸಹಕಾರಿ ಚಳುವಳಿಗಳು ಹೆಮ್ಮೆಯ ಸಂಗತಿ ಇಂತಹ ಮಹಾಪುರುಷರ ದೂರ ಮುಂದಾಲೋಚನೆಯಿಂದಾಗಿ ಇಂದು ಸಹಾಕಾರದ ಎರಡನೇ ಪರ್ಯಾಯವಾಗಿ ಕಾರ್ಯನಿರ್ವಹಿಸುವುದರ ಮುಖಾಂತರವನ್ನು ಜನಸಾಮಾನ್ಯರಿಗೆ ರೈತರಿಗೆ ಅತ್ಯಂತ ಹತ್ತಿರವಾಗಿ ಅವರ ಜೀವನ ಉಭಯಕ್ಕೆ ಪರೋಪಕಾರಿಯಾಗಿ ಅವರ ಆರ್ಥಿಕ ಸುಧಾರಣೆಗೆ ಇಂದು ಸಹಕಾರ ಚಳುವಳಿಯನ್ನ ಆಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಈ ಸಂದರ್ಭದಲ್ಲಿ ಕೇಂದ್ರ ಕಛೇರಿಯ ಹಿರಿಯ ಅಧಿಕಾರಿಯವರಾದ ಶ್ರೀ ಸೂರ್ಯಕಾಂತ ರಾಕಲೆ ಮತ್ತು ಪ್ರಾಂತೀಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಸಹಕಾರದ ಮೂಲ ಮಂತ್ರ ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ ಎಂಬ ಆಶಯದೊಂದಿಗೆ ಕಾರ್ಯನಿರ್ವಹಿಸಬೇಕು.**
**– ಜಿ. ನಂಜನಗೌಡ ಸಿಎ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



**ಹೊಸಪೇಟೆ :** ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ ಎಂಬ ಧ್ಯೇಯ ವಾಕ್ಯದೊಂದಿಗೆ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ರಾಜ್ಯ ಅಧ್ಯಕ್ಷರಾದ ಜಿ. ನಂಜನಗೌಡರು ಸಲಹೆ ನೀಡಿದರು. ಹೊಸಪೇಟೆ ನಗರದ ವಾರ್ಡ್ ನಂ.26 ರ ಹಳೆ ಪಲ್ಲೆಕಟ್ಟೆಯಲ್ಲಿ ವಿಜಯನಗರ ಶ್ರೀ ಲಕ್ಷ್ಮೀ ನರಸಿಂಹ ಸೌಹಾರ್ದ ಸಹಕಾರಿ ಸಂಘ ನಿ., ಹೊಸಪೇಟೆ ಇದರ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸಹಕಾರ ಚಳುವಳಿ ಇರುವುದು ಬಡವರಿಗಾಗಿ. ಬಡವರು ತಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಸಹಕಾರ ಸಂಘಗಳು ಕಟ್ಟಿಕೊಳ್ಳುವ ಮೂಲಕ ಈಡೇರಿಸಿಕೊಳ್ಳಬೇಕು. ಸಹಕಾರಿ ಸಂಘಗಳಲ್ಲಿ ಸದಸ್ಯರು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಪ್ರಾಮಾಣಿಕವಾಗಿ ಕಾರ್ಯನಿರ್ವಹಿದಾಗ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ತಿಳಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ದಿಗಂಬರ ರಾಜ ಭಾರತಿ ಸ್ವಾಮಿಜೀ ಅನ್ನಪೂರ್ಣೇಶ್ವರಿ ವಿದ್ಯಪೀಠ, ಇಂಗಳಿಗಿ ಗ್ರಾಮ, ಹೊಸಪೇಟೆ ವಹಿಸಿಕೊಂಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಟ್ಟಿ ಮಹೇಶ್ ವಹಿಸಿಕೊಂಡಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀ ಆರ್. ಕೊಟ್ರೇಶ್. ಮಾಜಿ ಅಧ್ಯಕ್ಷರು ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ. ಶ್ರೀ ಗೋಸಲ ಭರ್ಮಪ್ಪ ಮಾನ್ಯ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು. ಶ್ರೀ ಗೌಳಿ ಕುಮಾರ್ ಮಾನ್ಯ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು. ಶ್ರೀ ರಾಮಚಂದ್ರ ಮಾನ್ಯ ಅಧ್ಯಕ್ಷರು, ವಿಜಯನಗರ ಆಟೋ ಚಾಲಕರ ಸಂಘ ಹೊಸಪೇಟೆ ಶ್ರೀ ವಿ. ಶಂಕ್ರಚಾರ್ಯ ಮಾಜಿ. ಉಪಾಧ್ಯಕ್ಷರು, ಬಳ್ಳಾರಿ ಜಿಲ್ಲಾ ಯೂನಿಯನ್ ಸಹಕಾರಿ ನಿ., ಹೊಸಪೇಟೆ ವಾರ್ಡ್‌ನ ಹಿರಿಯ ಮುಖಂಡರು ಸಹಕಾರಿ ಆಡಳಿತ ಮಂಡಳಿಯ ನಿರ್ದೇಶಕರು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಯೂನಿಯನ್ ಮುಖ್ಯಕಾರ್ಯನಿರ್ವಹಕರಾದ ನಾಗರಾಜ್ ನಿರೂಪಿಸಿದರು. ಗೌಳಿ ಕುಮಾರ್ ಸ್ವಾಗತಿಸಿದರು. ವೀರಶೆಟ್ಟಿ ವಂದನಾರ್ಪಣೆ ಮಾಡಿದರು

## ಉದ್ಘಾಟನೆ



**ಬೆಳಗಾವಿ :** ದಿನಾಂಕ 05.05.2026 ರಂದು ಎಂಐಕೆ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಯಾದವಾಡ ತಾ. ಮೂಡಲಗಿ ಸಹಕಾರಿಯ ಪ್ರಾರಂಭೋತ್ಸವ ಜರುಗಿತು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪ.ಪೂ ಶ್ರೀ ವಿಶ್ವರಾಧ್ಯ ಮಹಾ ಸ್ವಾಮೀಜಿಯವರು ವಹಿಸಿದ್ದರು ಹಾಗೂ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ರವರು ವಹಿಸಿ, ಸೌಹಾರ್ದ ಸಹಕಾರಿ ಸಂಘಗಳಲ್ಲಿ ನಿರ್ದೇಶಕರ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹಾಂತೇಶ ಕತ್ತಿ ರವರು, ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.



**ಚಿಕ್ಕಮಗಳೂರು :** ದಿನಾಂಕ 27.05.2026 ರಂದು ಆಲ್ದೂರಿನಲ್ಲಿ ಸುಭದ್ರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಬಾಳೆಹೊನ್ನೂರು ಇದರ ನೂತನ ಶಾಖಾ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಸೌಹಾರ್ದ ಕಾಯ್ದೆಯ ಕುರಿತು ಮಾಹಿತಿ ನೀಡಲಾಯಿತು. ಸಹಕಾರ ಸಂಘ ಗಟ್ಟಿಯಾಗಲು ನಿರ್ದೇಶಕರ ಜೊತೆ ಸಿಬ್ಬಂದಿಗಳ ಪಾತ್ರವೂ ಬಹುಮುಖ್ಯ, ಸಹಕಾರ ಸಂಘಗಳು ಗಟ್ಟಿಯಾಗಿ ನೆಲೆ ನಿಲ್ಲಲು ನಿರ್ದೇಶಕರ ಜೊತೆ ಸಿಬ್ಬಂದಿಗಳ ಪಾತ್ರವೂ ಬಹುಮುಖ್ಯವಾಗಿರುತ್ತದೆ, ಪರಸ್ಪರ ಸಹಕಾರ ದಿಂದ ಮಾತ್ರ ಸಂಘಗಳು ಯಶಸ್ವಿಯಾಗಲು ಸಾಧ್ಯ ಎಂದು ಹೋಬಳಿ ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಸಿ.ಸುರೇಶ್ ಹೇಳಿದರು. ಪಟ್ಟಣದಲ್ಲಿ ಬಾಳೆಹೊನ್ನೂರು ಸುಭದ್ರ ಸೌಹಾರ್ದ ಸಹಕಾರ ಸಂಘದ ನೂತನ ಶಾಖೆಯನ್ನು ಉದ್ಘಾಟಿಸಿ ಮಾತನಾಡಿ ಸಹಕಾರ ಸಂಘಗಳನ್ನು ಹುಟ್ಟುಹಾಕುವುದು ಎಷ್ಟು ಶ್ರಮದಾಯಕವೂ ಅವುಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡುವುದು ಕೂಡ ಸವಾಲಿನ ಕೆಲಸವಾಗಿದೆ ನಿರ್ದೇಶಕರು, ಸಿಬ್ಬಂದಿಗಳು ಹಾಗೂ ಷೇರುದಾರರ ಪರಸ್ಪರ ಸಹಕಾರದಿಂದ ಮಾತ್ರ ಸಹಕಾರ ಸಂಘಗಳು ಅಭಿವೃದ್ಧಿ ಪಥದಲ್ಲಿ ಸಾಗಲು ಸಾಧ್ಯ ಎಂದರು. ಆಲೂರು ವೃತ್ತ ನಿರೀಕ್ಷಕ ಪಿ.ಪಿ ಸೋಮೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ಸುಭದ್ರ ಸೌಹಾರ್ದ ಸಹಕಾರ ಸಂಘವೂ ಬಾಳೆಹೊನ್ನೂರಿನಲ್ಲಿ ಪ್ರಧಾನ ಕಛೇರಿಯನ್ನು ಹೊಂದಿದ್ದು ಉತ್ತಮ ವ್ಯವಹಾರವನ್ನು ನಡೆಸಿ ಯಶಸ್ವಿಯಾಗಿದ್ದು, ಆಲ್ದೂರಿನಲ್ಲಿ ತನ್ನ ಮತ್ತೊಂದು ಶಾಖೆಯನ್ನು ತೆರೆದಿದ್ದು ಈ ಭಾಗದ ಜನರಿಗೆ ಅನುಕೂಲವಾಗಲಿದೆ, ಸಾಮಾನ್ಯ ವರ್ಗದ ಜನರಿಗೆ, ವ್ಯಾಪಾರಸ್ಥರಿಗೆ ಆರ್ಥಿಕವಾಗಿ ಸಹಕಾರವನ್ನು ನೀಡಿ ಆರ್ಥಿಕವಾಗಿ ಸದೃಡರಾಗಲು ಈ ಸಂಘವು ಸಹಕಾರ ಸಹಭಾಗಿ–ತ್ವದೊಂದಿಗೆ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯರಿ ಎಂದು

ಶುಭಹಾರೈಸಿದರು. ನೀಡುವಂತಾಗಲಿ, ಸಹಕಾರ ಸುಭದ್ರ ಸಹಕಾರ ಸಂಘದ ಅಧ್ಯಕ್ಷ ಮೋಹನ್‌ದಾಸ್ ಹೆಗ್ಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಜಕೀಯದಲ್ಲಿ ಸಹಕಾರವಿರಲಿ. ಆದರೆ ಸಹಕಾರ ರಂಗದಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಬಾರದು, ರಾಜಕೀಯದಿಂದ ದೂರವಿದ್ದಾಗ ಮಾತ್ರ ಆಗ ಮಾತ್ರ ಸಹಕಾರ ಸಂಘಗಳು ತಮ್ಮ ಮೂಲಭೂತ ಧ್ಯೇಯ ಉದ್ದೇಶಗಳನ್ನು ಈಡೇರಿಸಲು ಸಾಧ್ಯ ಎಂದರು.



**ಬೆಳಗಾವಿ** : ದಿನಾಂಕ 13.05.2026 ರಂದು ಶ್ರೀ ಬಸವ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಬೈಲಹೊಂಗಲ, ಇದರ ಸ್ಥಳಾಂತರಿಸಿದ ನೂತನ ಕಚೇರಿ ಉದ್ಘಾಟನೆ ಸಮಾರಂಭ ಬೈಲಹೊಂಗಲದಲ್ಲಿ ನೇರವೇ–ರಿತು. ದಿವ್ಯಸಾನಿಧ್ಯವನ್ನು ಶ್ರೀ ಮ.ನಿ.ಪ್ರ.ಸ್ವ. ನೀಲಕಂಠ ಮಹಾಸ್ವಾಮಿಗಳು, ಶ್ರೀ ಮಹಾಂತ ದುರದುಂಡೀಶ್ವರ ಮಠ, ಮುರಗೋಡರವರುಯ ವಹಿಸಿದ್ದರು. ಅಧ್ಯಕ್ಷತೆಯನ್ನು ಮಾಜಿ ಶಾಸಕರಾದ ಶ್ರೀ ಮೆಟಗುಡ್ಡರವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕರಾದ ಶ್ರೀ ಮಹಾಂತೇಶ ದೊಡಗೌಡರರವರು, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು, ಸಂಸ್ಥೆಯ ಸಂಸ್ಥಾಪಕರು & ಕೆ ಎಲ್ ಇ ನಿರ್ದೇಶಕರಾದ ಶ್ರೀ ವಿಜಯ ಮೆಟಗುಡ್ಡರವರು, ಪ್ರಾಂತೀಯ ಅಧಿಕಾ–ರಿಗಳಾದ ಶ್ರೀ ಬಸವರಾಜ ಹೊಂಗಲರವರು ಉಪಸ್ಥಿತರಿದ್ದರು. ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ಮ ಬಡ್ಡಿಮನಿ, ಉಪಾಧ್ಯಕ್ಷರಾದ ಶ್ರೀ ಮಲ್ಲನಗೌಡ ಪಾಟೀಲ ಹಾಗೂ ನಿರ್ದೇಶಕರು ವೇದಿಕೆ ಮೇಲೆ ಉಪಸ್ಥಿತ–ರಿದ್ದರು. ಸಹಕಾರಿಯ ಸದಸ್ಯರು, ಸಿಬ್ಬಂದಿಗಳು ಸಭೆಯಲ್ಲಿ ಭಾಗವಹಿಸಿದ್ದರು.



**ವಿಜಯನಗರ** : ವಿಜಯನಗರ ಜಿಲ್ಲೆಯ ಹರಪನಹಳ್ಳಿ ಪಟ್ಟಣದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಸನ್ಮಾನ್ಯ ಶ್ರೀ ಅಂಬಲಿ ಮಂಜುನಾಥ ಮತ್ತು ಶ್ರೀಮತಿಯವರಾದ ಶೈಲಜಾ ಇವರನ್ನು ಸ್ವಗೃಹದಲ್ಲಿ ಸೌಹಾರ್ದ ಕಾಯ್ದೆಯ ಬೆಳ್ಳಿ ಮಹೋತ್ಸವದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಸಂಯುಕ್ತ ಸಹಕಾರಿಯ ಪರವಾಗಿ ಗೌರವ ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ, ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷರಾದ ಶ್ರೀ ವೇಣುಗೋಪಾಲ್, ನಿರ್ದೇಶಕರಾದ ಮಂಜುನಾಥ ಹಾಗೂ ರವಿಕುಮಾರ್ ಇವರು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 26.05.2026 ರಂದು ಬಿಬಿಎ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕಲಬುರ್ಗಿ ನೂತನ ಸಹಕಾರಿಯ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಮಾನ್ಯ ಶ್ರೀ ಶೈಲಜ ತಪಲಿ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ್ ಮಹಾಜನ್, ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್ ಹಾಗೂ ಕಲಬುರ್ಗಿ ವಿಭಾಗದ ಪ್ರಾಂತೀಯ ಅಧಿಕಾರಿಯ ಶ್ರೀ ಸಂಜಯ್ ಕೊರಟಕರ ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಮಿಣಜಿಗಿ ಇವರು ವಹಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.

## ಹೊಸ ಸೌಹಾರ್ದ ಸಹಕಾರಿ ಸ್ಥಾಪನೆಗಾಗಿ ಪ್ರವರ್ತಕರ ಸಭೆ

**ಕೊಡಗು** : ದಿನಾಂಕ 14.05.2026 ರಂದು ಕುಶಾಲನಗರದಲ್ಲಿ ನೂತನ ಸಹಕಾರಿ ರಚನೆಯ ಕುರಿತು ಪ್ರವರ್ತಕರ ಸಭೆಯನ್ನು ಮಾಡಲಾಯಿತು ಈ ಸಭೆಯಲ್ಲಿ ಸಹಕಾರಿ ಸಂಘಗಳ ಕಾರ್ಯ ಚಟುವಟಿಕೆಗಳ ಕುರಿತು ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಸಭೆಯಲ್ಲಿ 6 ಜನ ಪ್ರವರ್ತಕರುಗಳು ಭಾಗವಹಿಸಿದ್ದರು.

**ಚಾಮರಾಜನಗರ** : ದಿನಾಂಕ 11.05.2026 ರಂದು ನೂತನ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ಸಂಬಂಧ ನಗುವನಹಳ್ಳಿ ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ ಇಲ್ಲಿ ಪ್ರವರ್ತಕರ ಸಭೆಯನ್ನು ಮಾಡಲಾಯಿತು ಈ ಸಂದರ್ಭದಲ್ಲಿ ಹಾಜರಿದ್ದ 17 ಪ್ರವರ್ತಕರಿಗೆ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ಸಂಬಂಧ ಮತ್ತು ಸೌಹಾರ್ದ ಕಾಯ್ದೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು.

# ಆದಾಯ ತೆರಿಗೆ ಕಾಯ್ದೆ, 2025ರ ಅಡಿಯಲ್ಲಿ 01.04.2026 ರಿಂದ ಜಾರಿಗೆ ಬರುವ ಟಿಡಿಎಸ್ (TDS) ನಿಬಂಧನೆಗಳು



– ಸಿಎ. ಮಧುಕರ ಜಿ ಹೆಗಡೆ

ಆದಾಯ ತೆರಿಗೆ ಕಾಯ್ದೆ, 2025 ಹಿಂದಿನ ಆದಾಯ ತೆರಿಗೆ ಕಾಯ್ದೆ, 1961ರ ಬದಲಾಗಿ 01.04.2026 ರಿಂದ ಜಾರಿಗೆ ಬಂದಿದೆ. 60 ಕ್ಕೂ ಹೆಚ್ಚು ವರ್ಷಗಳ ಅವಧಿಯಲ್ಲಿ ತಿದ್ದುಪಡಿ ಮಾಡಲಾದ ಸೆಕ್ಷನ್‌ಗಳು, ಸಬ್ ಸೆಕ್ಷನ್‌ಗಳು ಮತ್ತು ವಿವರಣಾತ್ಮಕ ಹೇಳಿಕೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಮೂಲಕ ಕಾಯ್ದೆಯನ್ನು ಸರಳಗೊಳಿಸುವುದು ಹಳೆಯ ಕಾಯ್ದೆಯನ್ನು ಬದಲಾಯಿಸುವ ಉದ್ದೇಶವಾಗಿದೆ. ಹಿಂದಿನ ಕಾಯ್ದೆಯು ಸುಮಾರು 800 ಸೆಕ್ಷನ್‌ಗಳನ್ನು ಹೊಂದಿತ್ತು, ಆದರೆ ಆದಾಯ ತೆರಿಗೆ ಕಾಯ್ದೆ, 2025 ರ ಅಡಿಯಲ್ಲಿ ಸೆಕ್ಷನ್ಗಳನ್ನು ಮರುಸಂಘಟಿಸಲಾಗಿದ್ದು, ಸುಮಾರು 536 ಸೆಕ್ಷನ್‌ಗಳನ್ನು ಮತ್ತು 16 ಶೆಡ್ಯೂಲ್‌ಗಳಿಗೆ ಇಳಿಸಲಾಗಿದೆ. ಕೆಲವು ನಿಯಮಗಳ ವ್ಯಾಖ್ಯಾನಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಉದ್ದೇಶಕ್ಕಾಗಿ ಸರಳಗೊಳಿಸಲಾಗಿದೆ. ಅಸೆಸ್ಮೆಂಟ್ ವರ್ಷದ (Assessment year) ಪರಿಕಲ್ಪನೆಯನ್ನು 2026–27 ರಿಂದ ತೆರಿಗೆ ವರ್ಷ (Tax year) ಎಂಬುದಾಗಿ ಬದಲಾಯಿಸಲಾಗಿದೆ.

**ಆದಾಯ ತೆರಿಗೆ, 2025 ರ ಅಡಿಯಲ್ಲಿ ಟಿಡಿಎಸ್ ನಿಬಂಧನೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಕೆಲವು ಪ್ರಮುಖ ಬದಲಾವಣೆಗಳು ಈ ಕೆಳಗಿನಂತಿವೆ:**

- **ಟಿಡಿಎಸ್ ದರ (Rate of TDS):** ವಿವಿಧ ಸೆಕ್ಷನ್‌ಗಳನ್ನು ಅಡಿಯಲ್ಲಿ ಟಿಡಿಎಸ್ ದರವನ್ನು ಬದಲಾಯಿಸಲಾಗಿಲ್ಲ ಮತ್ತು ಹಿಂದಿನ ದರಗಳನ್ನೇ ಉಳಿಸಿಕೊಳ್ಳಲಾಗಿದೆ.
- **ಕಡಿಮೆಗೊಳಿಸಲಾದ ಸೆಕ್ಷನ್‌ಗಳನ್ನು:** ಹಿಂದಿನ ಟಿಡಿಎಸ್ ನಿಬಂಧನೆಗಳು 192, 193, 194 (ಹಲವಾರು ಸಬ್ ಸೆಕ್ಷನ್‌ಗಳನ್ನು) ಮತ್ತು 195 ರಂತಹ ಒಟ್ಟು ಸುಮಾರು 60 ಸೆಕ್ಷನ್‌ಗಳನ್ನು ಒಳಗೊಂಡಿದ್ದವು. ಇವುಗಳನ್ನು ಮರುಗುಂಪು ಮಾಡಲಾಗಿದ್ದು, ಎರಡು ಮುಖ್ಯ ಸೆಕ್ಷನ್‌ಗಳಿಗೆ ಇಳಿಸಲಾಗಿದೆ; ಅಂದರೆ ಸಂಬಳಕ್ಕಾಗಿ (Salary) ಸೆಕ್ಷನ್ 392 ಮತ್ತು ಇತರವುಗಳಿಗಾಗಿ ಸೆಕ್ಷನ್ 393.
- **ಕೋಡ್ ಸಂಖ್ಯೆ ಆಧಾರಿತ ಪಾವತಿಗಳು:** ಹೊಸ ಆದಾಯ ತೆರಿಗೆ ಕಾಯ್ದೆಯಡಿ ಪ್ರತಿಯೊಂದು ರೀತಿಯ ಪಾವತಿಗೂ ಪ್ರತ್ಯೇಕ ಕೋಡ್ ಸಂಖ್ಯೆಯನ್ನು ನಿಗದಿಪಡಿಸಲಾಗಿದೆ, ಆದರೆ ಹಿಂದಿನ ಕಾಯ್ದೆಯು ಕೋಡ್ ಸಂಖ್ಯೆಗಳನ್ನು ಹೊಂದಿರಲಿಲ್ಲ. ಹೊಸ ನಿಬಂಧನೆಯ ಪ್ರಕಾರ, ಗುತ್ತಿಗೆದಾರರಿಗೆ (Contractors) ಮಾಡುವ ಪಾವತಿಯ ಮೇಲಿನ ಟಿಡಿಎಸ್‌ಗಾಗಿ ಕಡಿತಿತನಾದಾರರ (Deductee) ವಿಧವು ವೈಯಕ್ತಿಕ/ಹೆಚ್ಯುಎಫ್ (Individual/HUF) ಮತ್ತು ಇತರ ಕಡಿತಿತನಾದಾರರಾಗಿದ್ದರೆ ಪ್ರತ್ಯೇಕ ಚಲನ್ ಅಗತ್ಯವಿರುತ್ತದೆ, ಏಕೆಂದರೆ ಸದರಿ ಪಾವತಿಯ ಪ್ರಕಾರಕ್ಕೆ ಬೇರೆ ಬೇರೆ ಕೋಡ್ ಸಂಖ್ಯೆಯನ್ನು ನಿಗದಿಪಡಿಸಲಾಗಿದೆ. ಅದೇ ರೀತಿ, ಸೆಕ್ಯೂರಿಟೀಸ್ ಮೇಲಿನ ಬಡ್ಡಿಯನ್ನು ಹೊರತುಪಡಿಸಿ ಇತರ ಬಡ್ಡಿಯ ಮೇಲಿನ ಟಿಡಿಎಸ್ಗಾಗಿ, ಹಿರಿಯ ನಾಗರಿಕರು ಮತ್ತು ಇತರ ಕಡಿತಿತನಾದಾರರ ವಿಧಗಳಿಗೆ ಪ್ರತ್ಯೇಕ ಚಲನ್ ಬಳಸಬೇಕಾಗುತ್ತದೆ, ಏಕೆಂದರೆ ಆ ಪಾವತಿಗಳಿಗೆ ಕೋಡ್ ಸಂಖ್ಯೆಗಳು ಭಿನ್ನವಾಗಿವೆ.
- **ಮಾನವಶಕ್ತಿ ಸೇವೆಗಳು (Man power services):** ಹೊಸ ಆದಾಯ ತೆರಿಗೆ ನಿಯಮಗಳ ಅಡಿಯಲ್ಲಿ ಮಾನವಶಕ್ತಿ ಸೇವೆಗಳನ್ನು "ಕೆಲಸ" (Work) ಎಂದು ಸೇರಿಸಲಾಗಿದೆ ಮತ್ತು ಸೆಕ್ಷನ್ 393 ರ ಅಡಿಯಲ್ಲಿ ಗುತ್ತಿಗೆ ಪಾವತಿಯಾಗಿ ಟಿಡಿಎಸ್‌ಗೆ ಒಳಪಡಿಸಲಾಗುತ್ತದೆ.

**ಚಲನ್/ಫಾರಂ ಸಂಖ್ಯೆಗಳಲ್ಲಿನ ಬದಲಾವಣೆಗಳು :**

| ವಿವರಗಳು | ಹಳೆಯ ಕಾಯ್ದೆ | ಹೊಸ ಕಾಯ್ದೆ |
|---|---|---|
| ಟಿಡಿಎಸ್ ಪಾವತಿ ಚಲನ್ (TDS remittance challan) | 281 | 141 |
| ಸಂಬಳಕ್ಕಾಗಿ ಟಿಡಿಎಸ್ ಪ್ರಮಾಣಪತ್ರ (TDS certificate for Salary) | 16 | 130 |
| ಸಂಬಳೇತರ ಟಿಡಿಎಸ್ ಪ್ರಮಾಣಪತ್ರ (TDS certificate other than Salary) | 16A | 131 |
| ತ್ರೈಮಾಸಿಕ ಟಿಡಿಎಸ್ ರಿಟರ್ನ್– ಸಂಬಳ (Quarterly TDS return- Salary) | 24Q | 138 |
| ತ್ರೈಮಾಸಿಕ ಟಿಡಿಎಸ್ ರಿಟರ್ನ್– ಇತರವುಗಳು (Quarterly TDS return- others) | 26Q | 140 |

| | | |
|---|---|---|
| ಪ್ಯಾನ್ ಆಧಾರಿತ ಟಿಡಿಎಸ್– ಆಸ್ತಿ, ಬಾಡಿಗೆ, ವಿಡಿಎ ಇತ್ಯಾದಿ (PAN based TDS-Property, rent, VDA etc) | 26QB/QC/QD/QE | 141 |
| ವಾರ್ಷಿಕ ಮಾಹಿತಿ ಹೇಳಿಕೆ (AIS) | 26AS | 168 |
| ಶೂನ್ಯ/ಕಡಿಮೆ ಕಡಿತದ ಅರ್ಜಿ (NIL/Lower deduction application) | 15G/15H | 121 |
| ತೆರಿಗೆ ಆಡಿಟ್ ವರದಿ (Tax Audit report) | 3CA/CB/CD | 26 |

**ತೆರಿಗೆ ವರ್ಷ 2026–27 ರ ಟಿಡಿಎಸ್ ದರ ಪಟ್ಟಿ (TDS rate chart for the Tax Year 2026-27):**

| ಕೋಡ್ | ಹೊಸ ಸೆಕ್ಷನ್ (ಐಟಿ ಕಾಯ್ದೆ–2025) | ಹಳೆಯ ಸೆಕ್ಷನ್ | ಪಾವತಿಯ ಸ್ವರೂಪ | ದರಗಳು (%) | ಮಿತಿ (₹) |
|---|---|---|---|---|---|
| 1002 | 392 | 192 | ಸರ್ಕಾರಿ ನೌಕರರನ್ನು ಹೊರತುಪಡಿಸಿ ಇತರ ನೌಕರರ ಸಂಬಳ | | |
| 1003 | 392 | 192 | ಭಾರತೀಯ ಸರ್ಕಾರಿ ನೌಕರರ ಸಂಬಳ (ಕೇಂದ್ರ ಸರ್ಕಾರ) | | |
| 1004 | 392(7) | 192A | ಉದ್ಯೋಗಿಗೆ ಬರಬೇಕಾದ ಸಂಚಿತ ಬಾಕಿಯ ಯಾವುದೇ ಪಾವತಿ | | |
| 1006 | 393(1) [ಕೋಷ್ಟಕ: ಕ್ರ.ಸಂ. 1(ii)] | 194H | ಕಮಿಷನ್ ಅಥವಾ ಬ್ರೋಕರೇಜ್ ಇತರವುಗಳು | 2% | ₹20,000 |
| 1008 | 393(1) [ಕೋಷ್ಟಕ: ಕ್ರ.ಸಂ. 2(ii).D(a)] | 194I(a) | ಯಂತ್ರೋಪಕರಣಗಳು ಇತ್ಯಾದಿಗಳ ಮೇಲಿನ ಬಾಡಿಗೆ–ನಿರ್ದಿಷ್ಟಪಡಿಸಿದ ವ್ಯಕ್ತಿ | 2% | ತಿಂಗಳಿಗೆ ₹50,000 |
| 1009 | 393(1) [ಕೋಷ್ಟಕ: ಕ್ರ.ಸಂ. 2(ii).D(b)] | 194I(b) | ಯಂತ್ರೋಪಕರಣಗಳು ಇತ್ಯಾದಿಗಳನ್ನು ಹೊರತುಪಡಿಸಿ ಇತರ ಬಾಡಿಗೆ– ನಿರ್ದಿಷ್ಟಪಡಿಸಿದ ವ್ಯಕ್ತಿ | 10% | ತಿಂಗಳಿಗೆ ₹50,000 |
| 1012 | 393(1) [ಕೋಷ್ಟಕ: ಕ್ರ.ಸಂ. 3(i)] | 194IA | ಕೃಷಿ ಭೂಮಿಯನ್ನು ಹೊರತುಪಡಿಸಿ ಯಾವುದೇ ಸ್ಥಾವರ ಆಸ್ತಿಯ ವರ್ಗಾವಣೆಗಾಗಿ ಯಾವುದೇ ಪ್ರತಿಫಲ | 1% | ₹50 ಲಕ್ಷ |
| 1020 | 393(1) [ಕೋಷ್ಟಕ: ಕ್ರ.ಸಂ. 5(ii).D(a)] | 194A | ಸೆಕ್ಯೂರಿಟೀಸ್ ಮೇಲಿನ ಬಡ್ಡಿಯನ್ನು ಹೊರತುಪಡಿಸಿ ಇತರ ಬಡ್ಡಿಯ ಮೂಲಕ ಬರುವ ಯಾವುದೇ ಆದಾಯ, ಕಡಿತಿತನಾದಾರ/ಪಾವತಿ ಸ್ವೀಕರಿಸುವವರು ಹಿರಿಯ ನಾಗರಿಕರಾಗಿದ್ದರೆ | 10% | ₹1,00,000 |
| 1021 | 393(1) [ಕೋಷ್ಟಕ: ಕ್ರ.ಸಂ. 5(ii).D(b)] | 194A | ಸೆಕ್ಯೂರಿಟೀಸ್ ಮೇಲಿನ ಬಡ್ಡಿಯನ್ನು ಹೊರತುಪಡಿಸಿ ಇತರ ಬಡ್ಡಿಯ ಮೂಲಕ ಬರುವ ಯಾವುದೇ ಆದಾಯ, ಕಡಿ–ತಿತನಾದಾರ/ಪಾವತಿ ಸ್ವೀಕರಿಸುವವರು ಹಿರಿಯ ನಾಗರಿಕರಲ್ಲದ ಇತರರಾಗಿದ್ದರೆ | 10% | ₹50,000 |
| 1022 | 393(1) [ಕೋಷ್ಟಕ: ಕ್ರ.ಸಂ. 5(iii)] | 194A | ಸೆಕ್ಯೂರಿಟೀಸ್ ಮೇಲಿನ ಬಡ್ಡಿಯಾಗಿರುವ ಯಾವುದೇ ಇತರ ಬಡ್ಡಿಯ ಆದಾಯ | 10% | ₹10,000 |
| 1023 | 393(1) [ಕೋಷ್ಟಕ: ಕ್ರ.ಸಂ. 6(i).D(a)] | 194C | ಗುತ್ತಿಗೆದಾರ ಮತ್ತು ನಿರ್ದಿಷ್ಟಪಡಿಸಿದ ವ್ಯಕ್ತಿಯ ನಡುವಿನ ಒಪ್ಪಂದದ ಅನ್ವಯ ಯಾವುದೇ ಕೆಲಸವನ್ನು ನಿರ್ವಹಿಸಲು (ಯಾವುದೇ ಕೆಲಸವನ್ನು ನಿರ್ವಹಿಸಲು ಕಾರ್ಮಿಕರ ಪೂರೈಕೆ ಸೇರಿದಂತೆ) ನೀಡಲಾಗುವ ಯಾವುದೇ ಮೊತ್ತ, ಗುತ್ತಿಗೆದಾರನು ವೈಯಕ್ತಿಕ ಅಥವಾ ಹಿಂದೂ ಅವಿಭಕ್ತ ಕುಟುಂಬ (HUF) ಆಗಿದ್ದರೆ | 1% | (a) ಒಂದೇ ಪಾವತಿಗೆ ₹30000; ಮತ್ತು<br>(b) ವರ್ಷದಲ್ಲಿ ಒಟ್ಟು ಪಾವತಿಯ ಸಂದರ್ಭದಲ್ಲಿ ₹100000. |

| | | | | | |
|---|---|---|---|---|---|
| 1024 | 393(1) [ಕೋಷ್ಟಕ: ಕ್ರ.ಸಂ. 6(i).D(b)] | 194C | ಗುತ್ತಿಗೆದಾರ ಮತ್ತು ನಿರ್ದಿಷ್ಟಪಡಿಸಿದ ವ್ಯಕ್ತಿಯ ನಡುವಿನ ಒಪ್ಪಂದದ ಅನ್ವಯ ಯಾವುದೇ ಕೆಲಸವನ್ನು ನಿರ್ವಹಿಸಲು (ಯಾವುದೇ ಕೆಲಸವನ್ನು ನಿರ್ವಹಿಸಲು ಕಾರ್ಮಿಕರ ಪೂರೈಕೆ ಸೇರಿದಂತೆ) ನೀಡಲಾಗುವ ಯಾವುದೇ ಮೊತ್ತ, ಗುತ್ತಿಗೆದಾರನು ವೈಯಕ್ತಿಕ ಅಥವಾ ಹಿಂದೂ ಅವಿಭಕ್ತ ಕುಟುಂಬವನ್ನು ಹೊರತುಪಡಿಸಿ ಇತರ ವ್ಯಕ್ತಿಯಾಗಿದ್ದರೆ | 2% | (a) ಒಂದೇ ಪಾವತಿಗೆ ₹30000; ಮತ್ತು (b) ವರ್ಷದಲ್ಲಿ ಒಟ್ಟು ಪಾವತಿಯ ಸಂದರ್ಭದಲ್ಲಿ ₹100000. |
| 1026 | 393(1) [ಕೋಷ್ಟಕ: ಕ್ರ.ಸಂ. 6(iii).D(a)] | 194J(a) | (a) ತಾಂತ್ರಿಕ ಸೇವೆಗಳಿಗಾಗಿ ಶುಲ್ಕಗಳು (ವೃತ್ತಿಪರ ಸೇವೆಗಳಲ್ಲದ); ಅಥವಾ (b) ಸಿನಿಮಾಟೋಗ್ರಾಫಿಕ್ ಚಲನಚಿತ್ರಗಳ ಮಾರಾಟ, ವಿತರಣೆ ಅಥವಾ ಪ್ರದರ್ಶನಕ್ಕಾಗಿ ಪ್ರತಿಫಲದ ಸ್ವರೂಪದಲ್ಲಿರುವ ರಾಯಲ್ಟಿ; ಅಥವಾ (c) ಕಾಲ್ ಸೆಂಟರ್ ವ್ಯಾಪಾರ ಕಾರ್ಯಾಚರಣೆಯಲ್ಲಿ ಮಾತ್ರ ತೊಡಗಿರುವ ಪಾವತಿ ಸ್ವೀಕರಿಸುವವರ ಯಾವುದೇ ಮೊತ್ತ | 2% | ₹50,000 |
| 1027 | 393(1) [ಕೋಷ್ಟಕ: ಕ್ರ.ಸಂ. 6(iii).D(b)] | 194J(b) | (ಎ) ವೃತ್ತಿಪರ ಸೇವೆಗಳಿಗಾಗಿ ಶುಲ್ಕಗಳ ರೂಪದಲ್ಲಿರುವ ಯಾವುದೇ ಮೊತ್ತ; ಅಥವಾ (b) ಸೆಕ್ಷನ್ 26(2)(h) ನಲ್ಲಿ ಉಲ್ಲೇಖಿಸಲಾದ ಯಾವುದೇ ಮೊತ್ತ | 10% | ₹50,000 |
| 1028 | 393(1) [ಕೋಷ್ಟಕ: ಕ್ರ.ಸಂ. 6(iii).D(b)] | 194J(b) | ಕಂಪನಿಯ ನಿರ್ದೇಶಕರಿಗೆ ಸೆಕ್ಷನ್ 392 ರ ಅಡಿಯಲ್ಲಿ ತೆರಿಗೆ ಕಡಿತಗೊಳಿಸಬಹುದಾದ ಮೊತ್ತವನ್ನು ಹೊರತುಪಡಿಸಿ, ಯಾವುದೇ ಹೆಸರಿನಿಂದ ಕರೆಯಲ್ಪಡುವ ಸಂಭಾವನೆ ಅಥವಾ ಶುಲ್ಕಗಳು ಅಥವಾ ಕಮಿಷನ್ ರೂಪದಲ್ಲಿರುವ ಯಾವುದೇ ಮೊತ್ತ | 10% | |
| 1031 | 393(1) [ಕೋಷ್ಟಕ: ಕ್ರ.ಸಂ. 8(ii)] | 194Q | ಕಂಪನಿಯ ಯಾವುದೇ ಸರಕುಗಳ ಖರೀದಿಗೆ ಸಂಬಂಧಿಸಿದ ಯಾವುದೇ ಮೊತ್ತ | 0.1% | ₹50 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ |
| 1032 | 393(1) [ಕೋಷ್ಟಕ: ಕ್ರ.ಸಂ. 8(iii)] | 194P | ನಿರ್ದಿಷ್ಟಪಡಿಸಿದ ಹಿರಿಯ ನಾಗರಿಕರಿಗೆ ಮಾಡುವ ಪಾವತಿ, ಬ್ಯಾಂಕ್ ಟಿಡಿಎಸ್ ಕಡಿತಗೊಳಿಸಿ ಅವರ ಪರವಾಗಿ ರಿಟರ್ನ್ ಸಲ್ಲಿಸುತ್ತದೆ | | |
| 1064 | 393(3) [ಕೋಷ್ಟಕ: ಕ್ರ.ಸಂ. 5.D(a)] | 194N | ಬ್ಯಾಂಕ್/ಅಂಚೆ ಕಚೇರಿ/ಸಹಕಾರ ಸಂಘದಿಂದ ಸಹಕಾರ ಸಂಘವಾಗಿರುವ ಕಡಿತಿತನಾದಾರರಿಗೆ ನಗದು ರೂಪದಲ್ಲಿ ಕೆಲವು ಮೊತ್ತಗಳ ಪಾವತಿ | 2% | ₹3 ಕೋಟಿ |
| 1065 | 393(3) [ಕೋಷ್ಟಕ: ಕ್ರ.ಸಂ. 5.D(b)] | 194N | ಬ್ಯಾಂಕ್/ಅಂಚೆ ಕಚೇರಿ/ಸಹಕಾರ ಸಂಘದಿಂದ ಸಹಕಾರ ಸಂಘವಲ್ಲದ ಇತರ ವ್ಯಕ್ತಿಯಾಗಿರುವ ಕಡಿತಿತನಾದಾರರಿಗೆ ನಗದು ರೂಪದಲ್ಲಿ ಕೆಲವು ಮೊತ್ತಗಳ ಪಾವತಿ | 2% | ₹1 ಕೋಟಿ |
| 1067 | 393(3) [ಕೋಷ್ಟಕ: ಕ್ರ.ಸಂ. 7] | 194T | ಸಂಸ್ಥೆಯ ಪಾಲುದಾರರಿಗೆ (Partner) ಪಾವತಿಸಿದ ಅಥವಾ ಅವರ ಖಾತೆಗೆ (ಬಂಡವಾಳ ಖಾತೆ ಸೇರಿದಂತೆ) ಜಮೆ ಮಾಡಿದ ಸಂಬಳ, ಸಂಭಾವನೆ, ಕಮಿಷನ್, ಬೋನಸ್ ಅಥವಾ ಬಡ್ಡಿಯ ಸ್ವರೂಪದಲ್ಲಿರುವ ಯಾವುದೇ ಮೊತ್ತ | 10% | ₹20,000 |

## ಹಾಸನ ಜಿಲ್ಲಾ ಸಮನ್ವಯ ಸಮಿತಿ ಸಭೆ

**ಹಾಸನ :** ಸಹಕಾರ ಸಂಘಗಳ ಆಡಳಿತ ಇಲಾಖೆ ಮತ್ತು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಅಧಿಕಾರಿಗಳ ಜಿಲ್ಲಾ ಸಮನ್ವಯ ಸಮಿತಿ ಸಭೆಯು ದಿನಾಂಕ: 25.05.2026 ರಂದು ಬೆಳಗ್ಗೆ 11.00 ಘಂಟೆಗೆ ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಸನ ಇಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀ ಬಸವರಾಜು ಹೆಚ್.ಸಿ ಇವರು ವಹಿಸಿದ್ದರು, ಈ ಸಂದರ್ಭದಲ್ಲಿ ಹಾಸನ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಕಿರಣ್ ಕುಮಾರ್ ಕೆ.ಕೆ, ಸಹಾಯಕ ನಿಬಂಧಕರಾದ ಬಾಲಚಂದ್ರ ಡಿ.ಕೆ ಹಾಗೂ ಶ್ರೀ ಖಾಲೀದ್ ಇವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ಇವರು ಭಾಗವಹಿಸಿ ಹಾಸನ ಜಿಲ್ಲೆಯಲ್ಲಿ ಪ್ರಸ್ತುತ ಲೆಕ್ಕಪರಿಶೋಧನೆ ಬಾಕಿ ಹಾಗೂ ಪೂರ್ಣಗೊಂಡ ಸಹಕಾರಿಗಳ ಮಾಹಿತಿ ಹಾಗೂ ಕಾರ್ಯ ಸ್ಥಗಿತ, ಸಮಾಪನೆ ಆದೇಶ ಮತ್ತು ಹೊಸ ಸೌಹಾರ್ದ ಸಹಕಾರಿಗಳ ಅಂಕಿ ಅಂಶಗಳನ್ನು ನೀಡಲಾಯಿತು.

# ಉದ್ಯೋಗಿಗಳ ಭದ್ರತೆಗೆ ಕರ್ನಾಟಕದ ಕಡ್ಡಾಯ ಗ್ರಾಚ್ಯುಟಿ ವಿಮೆ – ಒಂದು ಮಹತ್ವದ ಹೆಜ್ಜೆ

– ಶ್ರೀ ರಾಜಶೇಖರ ಹೂಗಾರ, ಸಹಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಸಹಕಾರ ಕ್ಷೇತ್ರವು ಕರ್ನಾಟಕದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಭದ್ರ ಅಡಿಪಾಯವಾಗಿದೆ. ಗ್ರಾಮೀಣ ಅಭಿವೃದ್ಧಿ, ಕೃಷಿ, ಹಣಕಾಸು ಸೇವೆಗಳು ಹಾಗೂ ಜನಸಾಮಾನ್ಯರ ಕಲ್ಯಾಣದಲ್ಲಿ ಸಹಕಾರ ಸಂಘಗಳು ನಿರ್ವಹಿಸುತ್ತಿರುವ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಸಂಸ್ಥೆಗಳ ಬೆಳವಣಿಗೆ ಮತ್ತು ಯಶಸ್ಸಿನ ಹಿಂದೆ ಸಾವಿರಾರು ಉದ್ಯೋಗಿಗಳ ಪರಿಶ್ರಮ, ಪ್ರಾಮಾಣಿಕತೆ ಹಾಗೂ ನಿಷ್ಠಾವಂತ ಸೇವೆ ಅಡಗಿದೆ. ಆದ್ದರಿಂದ ಉದ್ಯೋಗಿಗಳ ಸಾಮಾಜಿಕ ಭದ್ರತೆ ಮತ್ತು ನಿವೃತ್ತಿ ನಂತರದ ಆರ್ಥಿಕ ಸುರಕ್ಷತೆಯನ್ನು ಖಾತ್ರಿಪಡಿಸುವುದು ಪ್ರತಿಯೊಂದು ಸಹಕಾರ ಸಂಸ್ಥೆಯ ಮೂಲಭೂತ ಜವಾಬ್ದಾರಿಯಾಗಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ "Karnataka Compulsory Gratuity Insurance Rules, 2024" ಸಹಕಾರ ಕ್ಷೇತ್ರಕ್ಕೆ ಮಹತ್ವದ ಹಾಗೂ ದೂರದರ್ಶಿತ್ವದ ಹೆಜ್ಜೆಯಾಗಿದೆ. ಈ ನಿಯಮಗಳ ಉದ್ದೇಶ ಉದ್ಯೋಗಿಗಳ ಗ್ರಾಚ್ಯುಟಿ ಹಕ್ಕುಗಳನ್ನು ಕಾನೂನುಬದ್ಧವಾಗಿ ಮತ್ತಷ್ಟು ಸುರಕ್ಷಿತಗೊಳಿಸುವುದಾಗಿದೆ.

ಗ್ರಾಚ್ಯುಟಿ ಎನ್ನುವುದು ಉದ್ಯೋಗಿಯು ಸಂಸ್ಥೆಗೆ ಸಲ್ಲಿಸಿದ ದೀರ್ಘಕಾಲದ ಸೇವೆಗೆ ನೀಡಲಾಗುವ ಗೌರವಧನವಾಗಿದೆ. ಸಾಮಾನ್ಯವಾಗಿ ಕನಿಷ್ಠ ಐದು ವರ್ಷಗಳ ನಿರಂತರ ಸೇವೆಯ ನಂತರ ಉದ್ಯೋಗಿಯು ನಿವೃತ್ತಿ, ರಾಜೀನಾಮೆ ಅಥವಾ ಸೇವಾ ಮುಕ್ತಾಯದ ಸಂದರ್ಭದಲ್ಲಿ ಗ್ರಾಚ್ಯುಟಿ ಪಡೆಯಲು ಅರ್ಹನಾಗುತ್ತಾನೆ. ಇದು ಕೇವಲ ಹಣಕಾಸಿನ ನೆರವಲ್ಲ; ಸಂಸ್ಥೆಯು ತನ್ನ ಉದ್ಯೋಗಿಯ ಸೇವೆಯನ್ನು ಗೌರವಿಸುವ ಪ್ರತೀಕವಾಗಿದೆ.

### ಗ್ರಾಚ್ಯುಟಿ ಕಾಯ್ದೆ ಅನ್ವಯವಾಗಲು ಅಗತ್ಯವಿರುವ ಕನಿಷ್ಠ ಉದ್ಯೋಗಿಗಳ ಸಂಖ್ಯೆ

Payment of Gratuity Act, 1972 ಪ್ರಕಾರ, ಕಳೆದ ಹನ್ನೆರಡು ತಿಂಗಳ ಅವಧಿಯಲ್ಲಿ ಯಾವುದೇ ಒಂದು ದಿನವಾದರೂ 10 ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗಿಗಳು ಕಾರ್ಯನಿರ್ವಹಿಸಿರುವ ಪ್ರತಿಯೊಂದು ಸಂಸ್ಥೆಗೆ ಈ ಕಾಯ್ದೆ ಅನ್ವಯವಾಗುತ್ತದೆ. ಸಹಕಾರ ಸಂಘಗಳಿಗೂ ಇದೇ ನಿಯಮ ಅನ್ವಯಿಸುತ್ತದೆ. ಒಮ್ಮೆ ಈ ಕಾಯ್ದೆಯ ವ್ಯಾಪ್ತಿಗೆ ಬಂದ ನಂತರ, ಮುಂದಿನ ದಿನಗಳಲ್ಲಿ ಉದ್ಯೋಗಿಗಳ ಸಂಖ್ಯೆ 10 ಕ್ಕಿಂತ ಕಡಿಮೆಯಾದರೂ ಸಹ ಕಾಯ್ದೆಯ ಅನ್ವಯತೆ ಮುಂದುವರಿಯುತ್ತದೆ. ಹೀಗಾಗಿ ಅನೇಕ ಸಹಕಾರ ಸಂಸ್ಥೆಗಳು ಗ್ರಾಚ್ಯುಟಿ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿರ್ವಹಿಸುವುದು ಅನಿವಾರ್ಯವಾಗಿದೆ.

ಆದರೆ ವಾಸ್ತವದಲ್ಲಿ ಅನೇಕ ಸಹಕಾರ ಸಂಸ್ಥೆಗಳಲ್ಲಿ ಗ್ರಾಚ್ಯುಟಿ ಪಾವತಿಗಾಗಿ ಪ್ರತ್ಯೇಕ ನಿಧಿ ನಿರ್ಮಾಣ ಅಥವಾ ದೀರ್ಘಕಾಲಿಕ ಹಣಕಾಸು ಯೋಜನೆ ಸಮರ್ಪಕವಾಗಿ ಇರುವುದಿಲ್ಲ. ಪರಿಣಾಮವಾಗಿ ಉದ್ಯೋಗಿಗಳ ನಿವೃತ್ತಿ ಸಂದರ್ಭದಲ್ಲಿ ಏಕಕಾಲದಲ್ಲಿ ಹೆಚ್ಚಿನ ಮೊತ್ತ ಪಾವತಿಸುವ ಆರ್ಥಿಕ ಒತ್ತಡ ಉಂಟಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಗ್ರಾಚ್ಯುಟಿ ಪಾವತಿಯಲ್ಲಿ ವಿಳಂಬವೂ ಸಂಭವಿಸುತ್ತದೆ. ಇಂತಹ ಸಮಸ್ಯೆಗಳನ್ನು ತಡೆಯಲು ಗ್ರಾಚ್ಯುಟಿ ವಿಮಾ ವ್ಯವಸ್ಥೆ ಅತ್ಯಂತ ಪರಿಣಾಮಕಾರಿ ಪರಿಹಾರವಾಗಿದೆ.

ಹೊಸ ನಿಯಮಗಳ ಪ್ರಕಾರ, ಅರ್ಹ ಸಹಕಾರ ಸಂಘಗಳು LIC ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ವಿಮಾ ಸಂಸ್ಥೆಗಳ ಮೂಲಕ ಗ್ರಾಚ್ಯುಟಿ ವಿಮಾ ಪಾಲಿಸಿಯನ್ನು ಪಡೆಯಬೇಕಾಗಿದೆ. ಪ್ರತಿವರ್ಷ actuarial valuation ಆಧಾರದ ಮೇಲೆ ಸಂಸ್ಥೆಯ ಭವಿಷ್ಯದ ಗ್ರಾಚ್ಯುಟಿ ಹೊಣೆಗಾರಿಕೆಯನ್ನು ಅಂದಾಜಿಸಿ ಅಗತ್ಯ contribution ಅನ್ನು gratuity fund ಗೆ ಜಮಾ ಮಾಡಲಾಗುತ್ತದೆ.

Actuarial valuation ಎನ್ನುವುದು ಉದ್ಯೋಗಿಗಳ ವಯಸ್ಸು, ಸೇವಾ ಅವಧಿ, ವೇತನದ ಪ್ರಮಾಣ ಹಾಗೂ ನಿವೃತ್ತಿಯ ಅವಧಿಯನ್ನು ಪರಿಗಣಿಸಿ ಭವಿಷ್ಯದ ಗ್ರಾಚ್ಯುಟಿ ಬಾಧ್ಯತೆಯನ್ನು ವೈಜ್ಞಾನಿಕವಾಗಿ ಲೆಕ್ಕ ಹಾಕುವ ವಿಧಾನವಾಗಿದೆ. ಇದರಿಂದ ಸಂಸ್ಥೆಗೆ ಭವಿಷ್ಯದ ಹಣಕಾಸಿನ ಹೊಣೆಗಾರಿಕೆಯ ಸ್ಪಷ್ಟ ಚಿತ್ರಣ ದೊರೆಯುತ್ತದೆ ಮತ್ತು ಆರ್ಥಿಕ ಯೋಜನೆ ಪರಿಣಾಮಕಾರಿಯಾಗಿ ರೂಪಿಸಬಹುದಾಗಿದೆ.

ಗ್ರಾಚ್ಯುಟಿ ಲೆಕ್ಕಾಚಾರ ಸಾಮಾನ್ಯವಾಗಿ ಕೆಳಗಿನ ಸೂತ್ರದ ಆಧಾರದ ಮೇಲೆ ಮಾಡಲಾಗುತ್ತದೆ:

Gratuity=15×Last Drawn Salary×Years of Service/26

ಉದಾಹರಣೆಗೆ, ಉದ್ಯೋಗಿಯ ಕೊನೆಯ ವೇತನ ₹40,000 ಹಾಗೂ ಸೇವಾ ಅವಧಿ 20 ವರ್ಷಗಳಿದ್ದರೆ:

15×40000×20/26≈461538\ ಅಂದರೆ ಸುಮಾರು ₹4.61 ಲಕ್ಷ ಗ್ರಾಚ್ಯುಟಿ ದೊರೆಯುತ್ತದೆ.

ಸಹಕಾರ ಸಂಸ್ಥೆಗಳ ದೃಷ್ಟಿಯಿಂದ ಗ್ರಾಚ್ಯುಟಿ ವಿಮೆ ಹಲವು ರೀತಿಯಲ್ಲಿ ಲಾಭದಾಯಕವಾಗಿದೆ. ಪ್ರತಿವರ್ಷ ನಿಗದಿತ ಪ್ರಮಾಣದಲ್ಲಿ contribution ಪಾವತಿಸುವ ಮೂಲಕ ಭವಿಷ್ಯದಲ್ಲಿ ಏಕಕಾಲದಲ್ಲಿ ದೊಡ್ಡ ಮೊತ್ತ ಪಾವತಿಸುವ ಆರ್ಥಿಕ ಒತ್ತಡ ತಪ್ಪಿಸಬಹುದು. ಜೊತೆಗೆ ಹಣಕಾಸು ಶಿಸ್ತು, ಪಾರದರ್ಶಕತೆ ಹಾಗೂ audit compliance ಮತ್ತಷ್ಟು ಬಲವಾಗುತ್ತದೆ.

ಉದ್ಯೋಗಿಗಳ ದೃಷ್ಟಿಯಿಂದಲೂ ಇದು ಮಹತ್ವದ ಸಾಮಾಜಿಕ ಭದ್ರತೆಯಾಗಿದೆ. ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಯಾವುದೇ ರೀತಿಯದ್ದಾಗಿದ್ದರೂ ಗ್ರಾಚ್ಯುಟಿ ಹಣದ ಸುರಕ್ಷತೆ ಖಚಿತವಾಗುತ್ತದೆ. ನಿವೃತ್ತಿಯ ಸಂದರ್ಭದಲ್ಲಿ ಉದ್ಯೋಗಿಗಳಿಗೆ ಆರ್ಥಿಕ ನೆಮ್ಮದಿ ದೊರೆಯುವುದರ ಜೊತೆಗೆ ಸಂಸ್ಥೆಯ ಮೇಲಿನ ವಿಶ್ವಾಸ ಮತ್ತು ಕೆಲಸದ ತೃಪ್ತಿಯೂ ಹೆಚ್ಚುತ್ತದೆ.

ಇಂದಿನ ಸ್ಪರ್ಧಾತ್ಮಕ ಪರಿಸ್ಥಿತಿಯಲ್ಲಿ ಸಹಕಾರ ಸಂಸ್ಥೆಗಳು ಕೇವಲ ಹಣಕಾಸು ವ್ಯವಹಾರಗಳಿಗೆ ಸೀಮಿತವಾಗದೆ, ಉತ್ತಮ ಆಡಳಿತ, ಮಾನವೀಯ ಮೌಲ್ಯಗಳು ಹಾಗೂ ಉದ್ಯೋಗಿ ಕಲ್ಯಾಣದ ಮಾದರಿಯಾಗಬೇಕು. ಉದ್ಯೋಗಿಗಳ ಭವಿಷ್ಯವನ್ನು ಸುರಕ್ಷಿತಗೊಳಿಸುವುದು ಯಾವುದೇ ಸಂಸ್ಥೆಯ ನೈತಿಕ ಮತ್ತು ಕಾನೂನುಬದ್ಧ ಕರ್ತವ್ಯವಾಗಿದೆ.

ಹೀಗಾಗಿ ಕರ್ನಾಟಕ ಸರ್ಕಾರದ ಕಡ್ಡಾಯ ಗ್ರಾಚ್ಯುಟಿ ವಿಮೆ ನಿಯಮಗಳು ಸಹಕಾರ ಕ್ಷೇತ್ರದಲ್ಲಿ ಹಣಕಾಸಿನ ಶಿಸ್ತು, ಜವಾಬ್ದಾರಿತನ ಮತ್ತು ಉದ್ಯೋಗಿಗಳ ಸಾಮಾಜಿಕ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಐತಿಹಾಸಿಕ ಹೆಜ್ಜೆಯಾಗಿದೆ. ಗ್ರಾಚ್ಯುಟಿ ಎನ್ನುವುದು ಕೇವಲ ನಿವೃತ್ತಿ ಲಾಭವಲ್ಲ; ಅದು ಉದ್ಯೋಗಿಯ ಸೇವೆಗೆ ಸಲ್ಲಿಸುವ ಗೌರವ ಮತ್ತು ಸಂಸ್ಥೆಯ ಜವಾಬ್ದಾರಿತನದ ಪ್ರತಿಬಿಂಬವಾಗಿದೆ.

# ಸ್ವಾಸ್ಥ್ಯ, ಜ್ಞಾನ ಮತ್ತು ಅಂತರಂಗದ ಅರಿವಿಗಾಗಿ- ಯೋಗ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಹಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು




ಯೋಗೇನ ಚಿತ್ತಸ್ಯ ಪಾದೇನ ವಾಚಮ್।
ಮಲಂ ಶರೀರಸ್ಯ ಚ ವೈದ್ಯಕೇನ॥
ಯೋಪಕರೋತ್ತಮಂ ಪ್ರವರಂ ಮುನಿನಂ।
ಪತಂಜಲಿಂ ಪ್ರಾಂಜಲಿರನತೋಸ್ಮಿ॥

**ಅರ್ಥ :** ಯೋಗದ ಮೂಲಕ ಮನಸ್ಸಿನ ಮಲಿನತೆಯನ್ನುಮ ವ್ಯಾಕರಣದ ಮೂಲಕ ಮಾತಿನ ದೋಷಗಳನ್ನು ಆರ್ಯುವೇದ(ವೈದ್ಯಕೀಯ) ದ ಮೂಲಕ ಶರೀರದ ರೋಗಗಳನ್ನು ನಿವಾರಿಸಿದ, ಮುನಿಶ್ರೇಷ್ಠರಾದ ಆ ಮಹಾನ ಋಷಿ ಶ್ರೀ ಪತಂಲಿ ಮಹರ್ಷಿಗಳಿಗೆ ಕರ ಜೋಡಿಸಿ ನಮನಗಳು.

ಇಂದಿನ ಆಧುನಿಕ ಜಗತ್ತಿನ ಒತ್ತಡದಲ್ಲಿ ಸಿಲುಕಿರುವ ಮಾನವನ ಜೀವನವು ದೈಹಿಕ ಸ್ವಾಸ್ಥ್ಯ, ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಂಡಿದ್ದು, ದೈಹಿಕ ಆರೋಗ್ಯ, ಮಾನಸಿಕ ಶಾಂತಿ ಮತ್ತು ಅಧ್ಯಾತ್ಮಿಕ ಜಾಗೃತಿಯನ್ನು ಪಡೆಯಲು ಹವಣಿಸುವವರಿಗೆ ದೇಹ, ಮನಸ್ಸು ಮತ್ತು ಆತ್ಮದ ಐಕ್ಯತೆಗಾಗಿ ಯೋಗವೇ ಸೂಕ್ತವಾದ ಮಾರ್ಗ. ಇಂತಹ ಅದ್ಭುತವಾದ ಯೋಗವು ಇಂದು ಒಂದು ದೇಶಕ್ಕೆ ಸೀಮಿತಗೊಳ್ಳದೇ ಜಗತ್ತಿನಾದ್ಯಂತ ಹರಡಿ ಅತ್ಯಂತ ಪ್ರಿಯವಾಗಿದೆ. ಅಂತಹ ಯೋಗದ ಮಹತ್ವ ಸಾರುವುದರ ಮುಖಾಂತರ ಪ್ರತಿಯೊಬ್ಬರು ಯೋಗವನ್ನು ತಮ್ಮ ದೈನಂದಿನ ಚಟುವಟಿಕೆಯ ಅವಿಭಾಜ್ಯ ಅಂಗವಾಗಿ ಮಾರ್ಪಡಿಸಬೇಕಾಗಿದೆ.

ಯೋಗವು ಮೂಲತಃ ಒಂದು ಆಧ್ಯಾತ್ಮಿಕ ಶಿಸ್ತು, ಇದು ಮನಸ್ಸು ಮತ್ತು ದೇಹದ ನಡುವೆ ಸಾಮರಸ್ಯವನ್ನು ತರುವುದರ ಮುಖಾಂತರ ಕೇಂದ್ರೀಕರಿಸುವ ಅತ್ಯಂತ ಸೂಕ್ಷ್ಮ ವಿಜ್ಞಾನವನ್ನು ಆಧರಿಸಿದೆ. ಇದು ಆರೋಗ್ಯಕರ ಮತ್ತು ಉತ್ತಮಜೀವನದ ವಿಜ್ಞಾನ ಮತ್ತು ಕಲೆ.

'ಯೋಗ' ಎಂಬ ಪದವು 'ಯುಜ್' ಎಂಬ ಸಂಸ್ಕೃತ ಪದದಿಂದ ಬಂದಿದೆ, ಇದರಅರ್ಥ 'ಸೇರುವುದು' ಅಥವಾ 'ಒಂದು ಗೂಡಿಸುವುದು' ಯೋಗ ಮತ್ತು ಆಯುರ್ವೇದ ಎರಡೂ ಐತಿಹಾಸಿಕವಾಗಿ ಒಂದು ನಾಣ್ಯದ ಎರಡು ಮುಖಗಳಂತೆ ಸಂಬಂಧ ಹೊಂದಿವೆ ಮತ್ತು ಪ್ರಾಚೀನ ಕಾಲದಿಂದಲೂ ಪರಸ್ಪರಅಭಿವೃದ್ಧಿ ಹೊಂದಿವೆ.

**ಯೋಗದ ಇತಿಹಾಸ :**

ಯಾವುದೇ ಧರ್ಮ ಮತ್ತು ನಂಬಿಕೆ ವ್ಯವಸ್ಥೆಗಳು ಹುಟ್ಟುವ ಪೂರ್ವದಲ್ಲಿ ಯೋಗ ವಿಜ್ಞಾನವು ತನ್ನ ಉಗಮವನ್ನು ಹೊಂದಿದೆ ಮತ್ತು ನಾಗರಿಕತೆಯ ಉದಯದೊಂದಿಗೆ ಯೋಗಾಭ್ಯಾಸವು ಪ್ರಾರಂಭವಾಯಿತು ಎಂದು ನಂಬಲಾಗಿದೆ. ಯೋಗದಂತ ಕಥೆಯಲ್ಲಿ, ಶಿವನನ್ನು ಮುಖ್ಯಯೋಗಿ ಅಥವಾ ಆದಿಯೋಗಿ ಮತ್ತು ಪ್ರಧಾನ ಗುರು ಅಥವಾ ಆದಿ ಗುರು ಎಂದು ಪರಿಗಣಿಸಲಾಗಿದೆ.

ಸಿಂಧೂ, ಸರಸ್ವತಿ ಕಣಿವೆ ತೀರಗಳಲ್ಲಿ ನೆಲೆಸಿದ ನಾಗರಿಕತೆಯಲ್ಲಿ ಬಳಿಸಿರುವ ಮುದ್ರೆಗಳು ಮತ್ತು ಪಳೆಯುಳಿಕೆಗಳಲ್ಲಿ ಸಂಖ್ಯೆ ಮತ್ತು ಯೋಗ ಸಾಧನವನ್ನು ನಿರ್ವಹಿಸುವ ವ್ಯಕ್ತಿಗಳು ಪ್ರಾಚೀನ ಭಾರತದಲ್ಲಿ ಯೋಗದ ಉಪಸ್ಥಿತಿಯನ್ನು ಸೂಚಿಸುತ್ತಾರೆ. ಫಾಲಿಕ್ ಚಿಹ್ನೆಗಳು, ಮಾತೃದೇವಿಯ ವಿಗ್ರಹಗಳ ಮುದ್ರೆಗಳು ತಂತ್ರಯೋಗವನ್ನು ಸೂಚಿಸುತ್ತವೆ. ಜಾನಪದ ಸಂಪ್ರದಾಯಗಳು, ಸಿಂಧೂ ಕಣಿವೆ ನಾಗರಿಕತೆ, ವೈದಿಕ ಮತ್ತು ಉಪನಿಷತ್ತಿನ ಪರಂಪರೆ, ಬೌದ್ಧ ಮತ್ತುಜೈನ ಪದ್ಧತಿಗಳು, ದರ್ಶನಗಳು, ಮಹಾಭಾರತ ಮತ್ತುರಾಮಾಯಣದ ಕಥೆಗಳು, ಶೈವ, ವೈಷ್ಣವ ಮತ್ತು ತಾಂತ್ರಿಕ ಪದ್ಧತಿಗಳಲ್ಲಿ ಯೋಗದ ಉಪಸ್ಥಿತಿಯನ್ನು ಕಾಣಬಹುದು. ಮಹರ್ಷಿ ಪತಂಜಲಿರವರು 2000 ವರ್ಷಗಳ ಹಿಂದೆ ಯೋಗಸೂತ್ರಗಳನ್ನು ರಚಿಸಿರುತ್ತಾರೆ ಮತ್ತು ಅವರನ್ನು" ಯೋಗದ ಪಿತಾಮಹ" ಎಂದು ಕರೆಯಲಾಗಿದೆ.

ಬಹುಶಃ ಕ್ರಿ.ಪೂ 500 ರಿಂದ ಕ್ರಿ.ಶ 800ರ ಅವಧಿಯನ್ನು ಶಾಸ್ತ್ರೀಯ ಕಾಲಮಾನವೆಂದು ಪರಿಗಣಿಸಲಾಗಿದೆ. ಇದನ್ನು ಯೋಗದ ಇತಿಹಾಸ ಮತ್ತು ಪ್ರಗತಿಯಲ್ಲಿ ಅತ್ಯಂತ ಫಲವತ್ತಾದ ಮತ್ತು ಮಹತ್ತರವಾದ ಅವಧಿ ಎಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಯೋಗ ಸೂತ್ರಗಳು ಮತ್ತು ಭಗವದ್ಗೀತೆ ಇತ್ಯಾದಿಗಳ ಕುರಿತು ಮಹರ್ಷಿವ್ಯಾಸರ ವ್ಯಾಖ್ಯಾನಗಳು ಅಸ್ತಿತ್ವಕ್ಕೆ ಬಂದವು. ಈ ಅವಧಿಯನ್ನು ಮುಖ್ಯವಾಗಿ ಭಾರತದ ಇಬ್ಬರು ಅದ್ಭುತ ಧಾರ್ಮಿಕ ಬೋಧಕರಾದ ಮಹಾವೀರ ಮತ್ತು ಬುದ್ಧರಿಗೆ ಮೀಸಲಿಡಬಹುದು. ಐದು ಅದ್ಭುತ ಪ್ರತಿಜ್ಞೆಗಳ ಪರಿಕಲ್ಪನೆ – ಮಹಾವೀರರಿಂದ ಪಂಚ ಮಹಾವ್ರತ ಮತ್ತು ಬುದ್ಧರಿಂದ ಅಷ್ಟಾಂಗ ಮಾರ್ಗ– ಯೋಗ ಸಾಧನೆಯ

ಆರಂಭಿಕ ಸ್ವರೂಪವೆಂದುಚೆನ್ನಾಗಿ ಪರಿಗಣಿಸಬಹುದು. ಭಗವದ್ಗೀತೆಯಲ್ಲಿ ನಾವು ಅದರ ಹೆಚ್ಚು ನಿಸ್ಸಂದಿಗ್ಧವಾದ ಸ್ಪಷ್ಟೀಕರಣವನ್ನು ಕಾಣುತ್ತೇವೆ, ಇದುಜ್ಞಾನಯೋಗ, ಭಕ್ತಿಯೋಗ ಮತ್ತು ಕರ್ಮಯೋಗದ ಕಲ್ಪನೆಯನ್ನು ಸಂಕೀರ್ಣವಾಗಿ ಪ್ರದರ್ಶಿಸಿದೆ. ಈ ಮೂರು ವಿಧದ ಯೋಗಗಳು ಇನ್ನೂ ಮಾನವ ಬುದ್ಧಿಮತ್ತೆಯ ಅತ್ಯಂತ ಗಮನಾರ್ಹ ಪ್ರಕರಣವಾಗಿದೆ ಮತ್ತು ಇಂದಿಗೂ ಜನರುಗೀತೆಯಲ್ಲಿ ತೋರಿಸಿರುವ ತಂತ್ರಗಳನ್ನು ಅನುಸರಿಸುವ ಮೂಲಕ ಶಾಂತಿಯನ್ನು ಕಂಡುಕೊಳ್ಳುತ್ತಾರೆ. ಪತಂಜಲಿಯ ಯೋಗ ಸೂತ್ರವು ಯೋಗದ ವಿವಿಧ ಭಾಗಗಳನ್ನು ಒಳಗೊಂಡಿರುವುದರ ಜೊತೆಗೆ, ಪ್ರಾಥಮಿಕವಾಗಿ ಯೋಗದ ಅಷ್ಟಾಂಗ ಮಾರ್ಗಕ್ಕೆ ಸಂಬಂಧಿಸಿದೆ. ವ್ಯಾಸರಿಂದ ಯೋಗ ಸೂತ್ರದ ಬಗ್ಗೆ ಬಹಳ ಮುಖ್ಯವಾದ ವ್ಯಾಖ್ಯಾನವನ್ನು ಸಹ ರಚಿಸಲಾಗಿದೆ.ಈ ಅವಧಿಯಲ್ಲಿಯೇ ಮನಸ್ಸಿನ ಅಂಶಕ್ಕೆ ಮಹತ್ವ ನೀಡಲಾಯಿತು ಮತ್ತು ಅದನ್ನು ಯೋಗ ಸಾಧನೆಯ ಮೂಲಕ ನಿಸ್ಸಂದೇಹವಾಗಿ ಹೊರತರಲಾಯಿತು. ಮನಸ್ಸು ಮತ್ತು ದೇಹ ಎರಡನ್ನೂ ನಿಯಂತ್ರಣದಲ್ಲಿಟ್ಟುಕೊಳ್ಳುವ ಮೂಲಕ ಸಮಚಿತ್ತತೆಯನ್ನು ಪಡೆಯಬಹುದು ಎಂದು ತಿಳಿಸಲಾಯಿತು. ಕ್ರಿ.ಶ. 800 – ಕ್ರಿ.ಶ. 1700 ರ ನಡುವಿನ ಅವಧಿಯನ್ನು ಶಾಸ್ತ್ರೀಯೋತ್ತರ ಅವಧಿ ಎಂದು ಗ್ರಹಿಸಲಾಗಿದೆ, ಇದರಲ್ಲಿ ಮಹಾನ್ ಆಚಾರ್ಯತ್ರಯರಾದ ಆದಿ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಾಧವಾಚಾರ್ಯರು ಈ ಅವಧಿಯಲ್ಲಿ ಮಹಾನ್‌ಕೊಡುಗೆ ನೀಡಿದರು. ಸೂರದಾಸ, ತುಲಸಿದಾಸ, ಪುರಂದರದಾಸ, ಮೀರಾಬಾಯಿ ಅವರ ಪಾಠಗಳು ಈ ಅವಧಿಯಲ್ಲಿ ಗಣನೀಯ ಪೋಷಕರಾಗಿದ್ದರು. ಹಠಯೋಗ ಸಂಪ್ರದಾಯದ ನಾಥ ಯೋಗಿಗಳಾದ ಗುರು ಮಚ್ಚೇಂದ್ರನಾಥ, ಗುರು ಗೋರಾಕನಾಥ, ಅವರು ಈ ಅವಧಿಯಲ್ಲಿ ಹಠಯೋಗ ಪದ್ಧತಿಗಳನ್ನು ಜನಪ್ರಿಯಗೊಳಿಸಿದ ಗಮನಾರ್ಹ ವ್ಯಕ್ತಿಗಳಲ್ಲಿ ಕೆಲವರು.

ಕ್ರಿ.ಶ 1700–1900ರ ಅವಧಿಯನ್ನು ಆಧುನಿಕ ಕಾಲವೆಂದು ಪರಿಗಣಿಸಲಾಗಿದೆ. ಇದರಲ್ಲಿ ಅದ್ಭುತ ಯೋಗಾಚಾರ್ಯರು–ರಮಣ ಮಹರ್ಷಿ, ರಾಮಕೃಷ್ಣ ಪರಮಹಂಸ, ಪರಮಹಂಸ ಯೋಗಾನಂದ ಮತ್ತು ವಿವೇಕಾನಂದರು ರಾಜಯೋಗದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ವೇದಾಂತ, ಭಕ್ತಿಯೋಗ, ನಾಥಯೋಗ ಅಥವಾ ಹಠ–ಯೋಗವು ಪ್ರವರ್ಧಮಾನಕ್ಕೆ ಬಂದ ಅವಧಿ ಇದು. ಗೋರಕ್ಷಾಶತಕದಷಡಂಗ–ಯೋಗ, ಹಠಯೋಗ ಪ್ರದೀಪಿಕಾದ ಚತುರಂಗ–ಯೋಗ, ಘೇರಾಂಡ ಸಂಹಿತೆಯ ಸಪ್ತಾಂಗ–ಯೋಗ, ಹಠಯೋಗದ ತತ್ವ ಹಿಡುವಳಿದಾರರಾಗಿದ್ದರು.

ಪ್ರಸ್ತುತ ಆಧುನಿಕ ಪರಿಸ್ಥಿತಿಯಲ್ಲಿ ಆರೋಗ್ಯದ ಸಂರಕ್ಷಣೆ, ನಿರ್ವಹಣೆ ಮತ್ತು ಉತ್ತೇಜನಕ್ಕಾಗಿ ಯೋಗಾಭ್ಯಾಸಗಳ ಬಗ್ಗೆ ಎಲ್ಲರಿಗೂ ಒಂದು ದೃಢ ನಿಶ್ಚಯವಿದೆ. ಸ್ವಾಮಿ ಶಿವಾನಂದ, ಶ್ರೀ ಟಿ. ಕೃಷ್ಣಮಾಚಾರ್ಯ, ಸ್ವಾಮಿ ಕುವಲಯಾನಂದ, ಶ್ರೀ ಯೋಗೇಂದರ, ಸ್ವಾಮಿರಾಮತೀರ್ಥ, ಶ್ರೀ ಅರಬಿಂದೋ, ಮಹರ್ಷಿ ಮಹೇಶ್‌ಯೋಗಿ, ಆಚಾರ್ಯರಜನೀಶ್, ಪಟ್ಟಾಬಿ , ಜೋಯಿಸ್, ಬಿಕೆಎಸ್. ಅಯ್ಯಂಗಾರ್, ಸ್ವಾಮಿ ಸತ್ಯಾನಂದ ಸರಸ್ವತಿ, ಹರಿದ್ವಾರದ ರಾಮದೇವಬಾಬ ಹಾಗೂ ದೇಶದ ಪ್ರಧಾನಮಂತ್ರಿಯಾದ ನರೇಂದ್ರ ಮೋದಿರವರ ಮುತವರ್ಜಿಯಿಂದ ವಿಶ್ವ ಸಂಸ್ಥೆಯು ಜೂನ್ 21, 2014 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ ಎಂದು ಘೋಷಣೆ ಮಾಡಲಾಯಿತು. ಇದರಿಂದಾಗಿ ಯೋಗವು ಪ್ರಪಂಚದಂತ್ಯ ಹರಡುವುದರ ಮುಖಾಂತರ ಕೋಟ್ಯಾಂತರ ಜನರು ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳುವುದರ ಮುಖಾಂತರ ಸ್ವಾಸ್ಥ್ಯವನ್ನು ಅಳವಡಿಸಿಕೊಂಡಿದ್ದಾರೆ. ಪ್ರತಿಯೊಬ್ಬರು ಯೋಗವನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮುಖಾಂತರಜೂನ 21, ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸೋಣ.

### ಯೋಗದಿಂದ ಉಪಯೋಗಗಳು

1. ದೈಹಿಕ ಸ್ವಾಸ್ಥ್ಯ.
2. ಮಾನಸಿಕ ಶಾಂತಿ.
3. ಉಸಿರಾಟದ ನಿಯಂತ್ರಣ ಮತ್ತು ಸುಧಾರಣೆ.
4. ರೋಗ ನಿರೋಧಕ ಶಕ್ತಿ ಹೆಚ್ಚಳ.
5. ಉತ್ತಮ ನಿದ್ರೆ.
6. ಆತ್ಮವಿಶ್ವಾಸ ಅಭಿವೃದ್ಧಿ.

### ದಿನನಿತ್ಯ ಮಾಡಬಹುದಾದ ಸರಳ ಯೋಗಾಸನಗಳು

1. ತಾಡಾಸನ.
2. ವೃಕ್ಷಾಸನ.
3. ಭುಜಂಗಾಸನ.
4. ವಜ್ರಾಸನ.
5. ಪ್ರಾಣಾಯಾಮ.
6. ಶವಾಸನ.

- ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಮಾಡುವುದು ಉತ್ತಮ.
- ನಿಧಾನವಾಗಿ ಮತ್ತು ಸರಿಯಾದ ವಿಧಾನದಲ್ಲಿ ಅಭ್ಯಾಸ.
- ದಿನಕ್ಕೆ ಕನಿಷ್ಠ 30 ನಿಮಿಷ.
- ಉಸಿರಾಟದ ಮೇಲೆ ಗಮನ.

# ಸಹಕಾರಿ ನೌಕರರು ಜನರ/ಸದಸ್ಯರ ಸೇವಕರು



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಲೋಕಸಭಾ ಸದಸ್ಯರಾದ ಶಶಿತರೂರ್ ಅವರು "ವೀಕ್" ವಾರ ಪತ್ರಿಕೆಯಲ್ಲಿ (ಪುಟ 24, ಮಾರ್ಚ್ 22–2026) ಈ ಕೆಳಕಂಡಂತೆ ಉಲ್ಲೇಖಿಸಿದ್ದಾರೆ.

"we must restore institutional integrity, empower local bodies and ensure that public servents serve the public, not party functionaries"

ಅಂದರೆ ಶಾಸನಾತ್ಮಕ ಸಂಸ್ಥೆಗಳಲ್ಲಿ ನೇಮಕವಾದ ಅಧಿಕಾರ/ನೌಕರರು ಪಕ್ಷದ ಕಾರ್ಯಕರ್ತರಿಗೆ ನಿಷ್ಠೆ ವಹಿಸದೇ, ಪ್ರಜೆಗಳಿಗೆ ಸೇವೆ ಮಾಡುವ ಪ್ರವೃತ್ತಿ ಹೊಂದಿರಬೇಕು. ಇದಕ್ಕೆ ಸಹಕಾರಿ ಸಂಸ್ಥೆಗಳಲ್ಲಿನ ವ್ಯವಸ್ಥೆ ಬಗ್ಗೆ ವಿಮರ್ಷಿಸ ಬಯಸುತ್ತೇನೆ. ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ರಚನೆ ಮಾಡುವಾಗ ಇದೇ ನೀತಿಯಂತೆ ಮಾಡುವ ಉದ್ದೇಶದಿಂದ ಜನ ಪ್ರತಿನಿಧಿಗಳೇ ತಮ್ಮ ಸಂಸ್ಥೆಯನ್ನು ನಿರ್ವಹಿಸಿಕೊಂಡು ಹೋಗುವ ಒಂದು ಅವಕಾಶ ಕಲ್ಪಿಸಿದೆ. ಅವರಿಗೆ ಸಹಕಾರಿಯಾಗಲು ಅಧಿಕಾರಿ/ನೌಕರರ ನೇಮಕ ಮಾಡಿಕೊಳ್ಳಲಾಗುತ್ತದೆ. ಆ ಉದ್ದೇಶದಿಂದ ಕಾಯಿದೆಯೂ ಪೀಠಿಕೆಯಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು.

ನೋಂದಣೆ ಮತ್ತು ರದ್ದತಿಯನ್ನು ಬಿಟ್ಟು ಉಳಿದಂತೆ ಸಹಕಾರಿಗಳ ಮುಕ್ತ ಕಾರ್ಯಚರಣೆಗೆ ತಡೆಯೊಡ್ಡುವ ಸರ್ಕಾರದ ಎಲ್ಲಾ ರೀತಿಯ ನಿರ್ಬಂಧಗಳು ಮತ್ತು ನಿಯಂತ್ರಣಗಳು ಮತ್ತು ಹಸ್ತಕ್ಷೇಪ ನಿವಾರಿಸುವುದು."

ಈ ಕಾಯಿದೆ ರಚನೆಯಾದ ನಂತರ ಸಂಯುಕ್ತ ಸಹಕಾರಿ ಕಾರ್ಯ ನಿರ್ವಹಣೆ ಮಾಡಲು ಮಂಡಳಿ ಸದಸ್ಯರಿಗೆ ನೀತಿ ಸಂಹಿತೆರೂಪಿಸುವ ಬದಲು, ಅವರ ಹಿರಿಯ ಅಧಿಕಾರಿ/ನೌಕರರಿಗೆ ಸೇವಾ ನಿಯಮಗಳನ್ನು ರೂಪಿಸಿ ಕೊಡುವುದು. ಅವರಲ್ಲಿ ಸರ್ಕಾರಿ ನೌಕರರಿಗೆ ಸಮಾನಂತರ ನಿಯಮಗಳನ್ನು ರೂಪಿಸಿಕೊಡುವುದು, ಚುನಾಯಿತ ಪ್ರತಿನಿಧಿಗಳು ಅವರ ಅಸ್ತಿತ್ವ ಉಳಿಸಿಕೊಳ್ಳಲು, ಅಧಿಕಾರಿಗಳು ತಯಾರಿಸಿದ ಸೇವಾ ನಿಯಮಗಳನ್ನು ಒಪ್ಪಿ ಜಾರಿಗೆ ತಂದರು. ಈ ಸೌಹಾರ್ದ ಕಾಯಿದೆಯಲ್ಲಿನ ಕಲಂ 61ರಲ್ಲಿ ಅವರ ಭದ್ರತೆ ಬಗ್ಗೆ ಉಲ್ಲೇಖಿಸಿದ್ದರೂ, ಅವರು ಪಡೆಯುವ ಸವಲತ್ತುಗಳ ಬಗ್ಗೆ ಹೆಚ್ಚಿನ ಗಮನ ಹರಿಸಿದ್ದರು. ಅದೇ ರೀತಿ ಕಲಂ 31ರಡಿ ಸದಸ್ಯ ಸಹಕಾರಿಗಳ ಸಿಬ್ಬಂದಿ ಬಗ್ಗೆ ಸಣ್ಣ ಉಲ್ಲೇಖವಿದೆ, ಅದರಲ್ಲಿ ಸಹಕಾರಿಯೂ ಮುಖ್ಯಕಾರ್ಯನಿರ್ವಹಕನಿಗೆ ಪ್ರಾಶಸ್ತ್ಯ ನೀಡಲಾಗದೇ, ಏಕೆಂದರೆ ಅವನು ಆ ಸಹಕಾರಿ ಮಂಡಳಿ ಸದಸ್ಯನಾಗಿರುತ್ತಾನೆ.

ಸೌಹಾರ್ದ ಕಾಯಿದೆಯಡಿ ನೌಕರರು/ಅಧಿಕಾರಿ/ಸಿಬ್ಬಂದಿಗೆ ಹೆಚ್ಚಿನ ಪ್ರಶಸ್ತ್ಯ ನೀಡಲಾಗಿಲ್ಲ ಏಕೆಂದರೆ ಚುನಾಯಿತ ಪ್ರತಿನಿಧಿಗಳೇ ಜಾಗೃತ ಜವಾಬ್ದಾರಿಯಿಂದ ಇರಬೇಕೆಂಬ ಆಶಯದಿಂದ. ಆದರೆ, ಚುನಾಯಿತ ಪ್ರತಿನಿಧಿಗಳು, ಸ್ವಾಯತ್ತತ್ತೆ ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣವನ್ನು ಸ್ವಚ್ಚತೆ ಎಂದು ತಿಳಿದು, ನೌಕರರ ನೇಮಕ ಮಾಡುವಾಗ, ಅವರು ಹೊಂದುವಂತಹ ವ್ಯಕ್ತಿಗಳನ್ನೆ ನೇಮಕ ಮಾಡಿಕೊಂಡು, ತಮ್ಮ ಸ್ವಾರ್ಥ ಸೃಜನ ಪಕ್ಷಪಾತ, ಮತ್ತು ವಿಧೇಯರನ್ನು ನೇಮಕ ಮಾಡಿಕೊಂಡು ಸಾಧನೆ ಮಾಡುವ ಉದ್ದೇಶ ಹೊಂದಿರುತ್ತಾರೆ. ಸಂಯುಕ್ತ ಸಹಕಾರಿ ನೇಮಕಾತಿಯಲ್ಲಿ, ಪ್ರಾರಂಭಿಕ ಹಂತದಲ್ಲಿ ನೇಮಕವಾದ ಅಧಿಕಾರಿಗಳು, ಸ್ಪರ್ಧಾತ್ಮಕ ಪರೀಕ್ಷೆಯಿಂದ ಆಯ್ಕೆಯಾದವರಲ್ಲಿ ಮಂಡಳಿಗೆ ಸಮೀಪವಾದ ವ್ಯಕ್ತಿಗಳೇ ಆಯ್ಕೆಗೊಂಡು ಆಡಳಿತದ ಭಾಗವಾದವರು. ಆದರೆ ಚುನಾಯಿತ ಮಂಡಳಿ, ಅಂತಹ ಅಧಿಕಾರಿಗಳ ನಿಯಂತ್ರಣ ಎನ್ನಲಾಗದಿದ್ದರೂ, ಅವರಿಂದ ತಮ್ಮ ಮುಂದಿನ ಚುನಾವಣೆಯಲ್ಲಿ ಸಹಕಾರಿಯಾಗುತ್ತದೆಂದು, ಅವರನ್ನು ಓಲೈಸಲು ಮತ್ತು ಅವರಿಂದ ಸದಸ್ಯ ಸಹಕಾರಿಗಳ ಮೇಲೆ ನಿಯಂತ್ರಣ ಮಾಡಲು ಪ್ರಯತ್ನಗಳನ್ನು ಮಾಡಲಾಯಿತು. ಈ ಹಿಂದೆ ಒಂದು ಲೇಖನದಲ್ಲಿ, ಉಲ್ಲೇಖ ಮಾಡಲಾಗಿದೆ. ಅಂದರೆ ಸಂಯುಕ್ತ ಸಹಕಾರಿಯೂ ಒಬ್ಬ ಹಿರಿಯ ಅಧಿಕಾರಿ, ಹೊಸದಾಗಿ ನೋಂದಾಯಿಸಲು ಮತ್ತು 1959ರ ಕಾಯಿದೆಯಿಂದ 1997ರ ಕಾಯಿದೆಗೆ ಪರಿವರ್ತನೆ ಮಾಡಲು ನಿಬಂಧಕ ಕಛೇರಿಯನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬ ಬಗ್ಗೆ ಆಗಿನ ಸಹಕಾರ ಸಚಿವರು ವಿಚಾರಣೆ ನಡೆಸುವ ಮಟ್ಟಿಗೆ ಮುಟ್ಟಿತ್ತು ಎಂಬುದು ಸಂಯುಕ್ತ ಸಹಕಾರಿ ಮಂಡಳಿಗೆ ತಿಳಿದಿತ್ತು. ಎಂಬುದೇ ಒಂದು ಆಭಾಸದ ವಿಷಯ.

ಈ ಲೇಖನದ ಉದ್ದೇಶ ಎಂದರೆ ಸದಸ್ಯ ಸಹಕಾರಿಗಳು ತನ್ನ ಸಿಬ್ಬಂದಿಯನ್ನು ಪದಾಧಿಕಾರಿಗಳ ಸೇವಕರು ಎಂದು ಏಕೆ ಭಾವಿಸುತ್ತಾರೆ. ಮಾಸಿಕ ಸಭೆ ನಡೆಸುವಾಗ, ಅಧ್ಯಕ್ಷರು ಹೇಳುವಂತೆ ನಡವಳಿಕೆ ಬರೆಯುವುದು, ವಿಷಯ ಚರ್ಚೆಯಾಗದೇ ಇದ್ದರು ಅದನ್ನು ನಡವಳಿಕೆಗಳಲ್ಲಿ ಸೇರಿಸಿ ಬರೆಯುವುದು. ಬರೆಯದಿದ್ದರೆ ಶಿಸ್ತುಕ್ರಮ ಜರುಗಿಸುವ ಬೆದರಿಕೆ ಅಥವಾ ತೆಗೆದು ಹಾಕುವ ಭಯದಿಂದ, ನೌಕರರು ಅಧ್ಯಕ್ಷರು / ಪದಾಧಿಕಾರಿಗಳು ಹೇಳಿದಂತೆ ಕೇಳದೆ ವಿಧಿ ಇಲ್ಲ ಎಂಬ ಭಾವನೆ, ನೌಕರರಲ್ಲಿ ಇರುವಂತೆ ನೋಡಿ ಕೊಂಡಾಗ, ಅಂತಹ ನೌಕರರನ್ನು ಸೇವಕರೆಂದು ಭಾವಿಸುವ ಆಡಳಿತ ಮಂಡಳಿವಿರಲವೇನಿಲ್ಲ. ಸದಸ್ಯ ಸಹಕಾರಿಗಳ ಅಧಿಕಾರಿ/ನೌಕರರು ಈ ಭಯದಲ್ಲಿಯೇ ಇರುವಂತೆ ಸದಸ್ಯ ಸಹಕಾರಿಗಳ ಪದಾಧಿಕಾರಿಗಳು ಗಮನಹರಿಸುತ್ತಾರೆ. ಇಂತಹ ವ್ಯವಸ್ಥೆ ಸೌಹಾರ್ದ ಕಾಯಿದೆಗೆ ಮಾತ್ರ ಎಂದು ಭಾವಿಸತಕ್ಕದ್ದಲ್ಲ. 1959ರ ಕಾಯಿದೆಯಲ್ಲೂ ಬಹಳಷ್ಟು ಸಂಖ್ಯೆಯಲ್ಲಿ ಸಂಸ್ಥೆಗಳು ಅಂದರೆ 16000

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 28
Permitted to Post under Periodical Post as per the Letter G3/14/RNP/2024-25 DATE 29.09.2025



ಹಾಲು ಉತ್ಪಾದಕ ಸಹಕಾರ ಸಂಘಗಳು, 5500 ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು, 3000 ಗ್ರಾಹಕ ಸಹಕಾರ ಸಂಸ್ಥೆಗಳು, 3000 ಗೃಹ ನಿರ್ಮಾಣ ಸಹಕಾರ ಸಂಸ್ಥೆಗಳ, 3000 ಕೃಷಿಯೇತರ ಪತ್ತಿನ ಸಹಕಾರ ಸಂಸ್ಥೆಗಳು, ಯಾವುದೇ ನೇಮಕಾತಿ ರೂಪದಲ್ಲಿ ಆಯ್ಕೆಯಾಗದೆ ಕಾಯಿದೆಯೂ ಸ್ಪಷ್ಟವಾಗಿ ನೇಮಕಾತಿ ಸಮಿತಿ ಮೂಲಕ ಆಯ್ಕೆಯಾಗಬೇಕೆಂದು ನಿಯಮ ಇದ್ದರೂ ಅದನ್ನು ಪಾಲಿಸದೇ ನೇಮಕವಾಗುತ್ತಾರೆ. ಅದನ್ನು ನಿಬಂಧಕರು ಯಾವುದೇ ಕ್ರಮಜರುಗಿಸದೇ ಆಮಿಷ ಗಮನಿಸುವುದೇ ಇಲ್ಲ). ಸುಮಾರು 40000 ಸಹಕಾರ ಸಂಸ್ಥೆಗಳು ನೊಂದಾವಣೆಯಾಗಿದ್ದು ಜಿಲ್ಲಾಮಟ್ಟದ/ ರಾಜ್ಯ ಮಟ್ಟದ/ ಕೇಂದ್ರಮಟ್ಟದ ಸಂಸ್ಥೆಗಳನ್ನು ಹೊರತುಪಡಿಸಿ ನೇಮಕಾತಿ ನಿಯಮಗಳನ್ನು ಪಾಲಿಸದೇ ನೇಮಕವಾದ ನೌಕರರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೂ ಇದು ನಿಬಂಧಕರಿಗೆ ಕಾಣಿಸುತ್ತಲೇ ಇಲ್ಲ. ಈ ರೀತಿ ನೇಮಕವಾದ ಅಧಿಕಾರಿ/ನೌಕರರು/ಸಿಬ್ಬಂದಿ ಆಡಳಿತ ಮಂಡಳಿಯ ಮರ್ಜಿಯಲ್ಲಿ ಕೆಲಸ ಮಾಡಿದಾಗ ಅವರನ್ನು ಪದಾಧಿಕಾರಿಗಳ ಸೇವಕರೆಂದೇ ಭಾವಿಸಬೇಕು. ಅದನ್ನು ಕಾರಣ ಸಂಖ್ಯೆ/ಸಹಕಾರಿ ನಡೆಸುವುದು.

ಪದಾಧಿಕಾರಿಗಳ ಮತ್ತು ಅದಕ್ಕೆ ಅಡ್ಡಬಂದಾಗ ನೌಕರರೂ/ ಅಧಿಕಾರಿಗಳು ಮುಂದುವರಿಯುವುದು ಸಾಧ್ಯವಾಗುವುದಿಲ್ಲ.

**ಉಪಸಂಹಾರ :**

ಒಂದು ಸಹಕಾರ ಸಂಸ್ಥೆ ಪ್ರಾರಂಭವಾಗುವುದು ಸಮಾನ ಮನಸ್ಕರು ತಮ್ಮ ಅತ್ಯಲ್ಪ ಅಂಪನ್ಮೂಲವನ್ನು ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಒಂದು ಆರ್ಥಿಕ ಸಂಸ್ಥೆ. ಅಂತಹ ಗುರಿ ಸಾಧಿಸಲು ನೌಕರರು/ಅಧಿಕಾರಿಗಳನ್ನು ನೇಮಕಮಾಡಿದಾಗ, ಅವರು ಸದಸ್ಯರಾಗುವ ಅವಕಾಶವಿಲ್ಲ ಒಂದಿಷ್ಟೂ ಸದಸ್ಯರ ಆರ್ಥಿಕ ಬೆಳವಣಿಗೆಗೆ ಸಮಾನಕೊಡುವುದರ ಬದಲು ಆ ಸಹಕಾರಿಯೂ ಪದಾಧಿಕಾರಿಗಳ ಮರ್ಜಿಯಲ್ಲಿ ಕೆಲಸ ನಿರ್ವಹಿಸಬೇಕಾಗಿದ್ದು, ಮಂಡಳಿ ಸದಸ್ಯರನ್ನು ಎದುರು ಹಾಕಿಕೊಳ್ಳಲು ಸಾಧ್ಯವಾಗದೆ ಪದಾಧಿಕಾರಿಗಳ ಸೇವಕರೆಂದು ದುಡಿಯುವುದೇ ಮುಖ್ಯ ಎಂದು ತಿಳಿದಿರುವ ನೌಕರರ ಸಂಖ್ಯೆಯೇ ಹೆಚ್ಚಿದೆ. ಇಲ್ಲವಾದರೇ ಅವರ ಸೇವೆಯಲ್ಲಿ ಮುಂದುವರೆಯಲು ಮಂಡಳಿ ಸದಸ್ಯರು ಬಿಡುವುದಿಲ್ಲವೆಂದು ಅಂತಹ ನೌಕರರ ಅರಿವಿದೆ. ಆದರೆ ರಾಜ್ಯಮಟ್ಟದ ಸಂಸ್ಥೆಗಳಲ್ಲಿ ಮಾತ್ರ ಪದಾಧಿಕಾರಿಗಳು ಅಧಿಕಾರಿಗಳಿಂದ ಅನುಕೂಲ ಪಡೆಯಲು ಅಂತಹ ಅಧಿಕಾರಿಗಳು ಮಂಡಿಸಿದ ಪ್ರಸ್ತಾವನೆಗಳನ್ನು ಒಪ್ಪಿಗೆ ನೀಡಿ, ತಮ್ಮ ಮುಂದಿನ ಚುನಾವಣೆಯಲ್ಲಿ ಯಾವುದೇ ತೊಡಕು ಆಗದಂತೆ ನೋಡಿಕೊಳ್ಳುತ್ತಾರೆ, 1959ರ ಕಾಯಿದೆಯಡಿ ಜಿಲ್ಲಾ ಬ್ಯಾಂಕ್‌ಗಳ ಹಾಲು ಉತ್ಪಾದಕ ಸಹಕಾರ ಒಕ್ಕೂಟಗಳಂತಹ ಸಂಸ್ಥೆಗಳು ಮಂಡಳಿಗಳು ಅಧಿಕಾರಿಗಳನ್ನು ಓಲೈಸದಿದ್ದರೆ ಚುನಾವಣೆಯಲ್ಲಿ ಗೆಲ್ಲುವುದು ಸುಲಭವಲ್ಲ ಎಂದು ನಂಬಿದ್ದಾರೆ. ಪ್ರಾಥಮಿಕ ಸಹಕಾರಿ ಸಂಸ್ಥೆಗಳಲ್ಲಿ, ನೌಕರರು/ಅಧಿಕಾರಿಗಳು ಪದಾಧಿಕಾರಿಗಳು ತಮ್ಮ ಸೇವಕರೆಂದು ತಿಳಿದಿರುವುದು ಅತಿಶಯೋಕ್ತಿಯಲ್ಲ. ಅದಕ್ಕೆ ನೌಕರರು/ ಅಧಿಕಾರಿಯನ್ನು ತಿಳಿದಿರುವುದು ವಿಪರ್ಯಾಸ. ಅದರೆ ಕಾನೂನಿನಡಿ ಯಾವುದೇ ದುರ್ವಿನಯೋವಾದಾಗ ಅಧಿಕಾರಿ/ನೌಕರರೇ ಸಿಕ್ಕಿ ಬೀಳುವುದು ಎಂದು ನೌಕರರಿಗೆ ತಿಳಿದಿರದೇ ಇರುವುದೇ ಒಂದು ವಿಪರ್ಯಾಸ.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
**ಕಲಬುರಗಿ ಪ್ರಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003